# ತಾನು, ದೇವರೆಂದು ಭಾವಿಸಿದ ಒಬ್ಬ ಮನುಷ್ಯನು

## (12:1-3, 18-23)

ಒಂದು ದಿವಸ ಅರಸನಾದ ನೆಬೂಕದ್ನೆಚರನು, "ಬಾಬೇಲಿನ ತನ್ನ ಅರಮನೆಯ ಮೇಲೆ ತಿರುಗಾಡುತ್ತಾ - ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾಮರ್ಥ್ಯ ಬಲದಿಂದ ರಾಜ ನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವದು ಇಗೋ, ಮಹಾ ಪಟ್ಟಣವಾದ ಈ ಬಾಬೇಲ್ ಎಂದು ಕೊಚ್ಚಿಕೊಂಡನು?" (ದಾನಿಯೇಲ 4:30). ಈ ಮಾತು ರಾಜನ ಬಾಯಿಂದ ಹೊರಡುತ್ತಿರುವಾಗ:

> ಅರಸನಾದ ನೆಬೂಕದ್ನೆಚ್ಚರನೇ, ನಿನಗಾದ ದೈವೋಕ್ತಿಯನ್ನು ಕೇಳು; ರಾಜ್ಯವು ನಿನ್ನಿಂದ ತೊಲಗಿದೆ, ನೀನು ಮನುಷ್ಯರೊಳಗಿಂದ ತಳ್ಳಲ್ಪಟ್ಟು ಕಾಡುಮೃಗಗಳೊಂದಿಗೆ ವಾಸಿಸುವಿ, ದನಗಳಂತೆ ಹುಲ್ಲುಮೇಯುವದೇ ನಿನಗೆ ಗತಿಯಾಗುವದು; ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ ಎಂಬುದು ನಿನ್ನ ತಿಳುವಳಿಕೆಗೆ ಬರುವದರೊಳಗೆ ಏಳು ವರುಷ ನಿನಗೆ ಹೀಗೆ ಕಳೆಯುವದು ಎಂದು ಆಕಾಶವಾಣಿಯಾಯಿತು (ದಾನಿಯೇಲ 4:31, 32).

ಈ ನುಡಿಯು ನೆಬೂಕದ್ನೆಚರನಲ್ಲಿ ತಕ್ಷಣವೇ ನೆರವೇರಿತು: ಅವನು ಮನುಷ್ಯರೊಳಗಿಂದ[1] ತಳ್ಳಲ್ಪಟ್ಟು ದನಗಳಂತೆ ಹುಲ್ಲು ಮೇಯುತ್ತಾ - "ಒಂದು ವೇಳೇ ಅರಮನೆಯ ಮೈದಾನದಲ್ಲಿ - ಆಕಾಶದ ಇಬ್ಬನಿಯಿಂದ ನೆನೆಯುತ್ತಾ ಇದ್ದನು. ಅವನ ಕೂದಲು ಹದ್ದುಗಳ ಗರಿಯಂತೆಯೂ ಅವನ ಉಗುರುಗಳು ಹಕ್ಕಿಗಳ ಉಗುರಿನ ಹಾಗೂ ಬೆಳೆದವು" (ದಾನಿಯೇಲ 4:33).

ಅವನ ಬುದ್ಧಿಯು ಅವನ ಸ್ವಾಧೀನಕ್ಕೆ ಹಿಂದಿರುಗಲು, ಅವನ ಈ ಯಶಸ್ಸಿಗೆ ಯೆಹೋವನೆ ಕಾರಣನು ಎಂದು ಅರಿತುಕೊಂಡನು: "ಆಗ ನಾನು ಪರಾತ್ಪರನನ್ನು ಕೊಂಡಾಡಿ ಸದಾ ಜೀವಿಸುವಾತನಿಗೆ ಸ್ತುತಿ ಸ್ತೋತ್ರಗಳನ್ನು ಸಲ್ಲಿಸಿದೆನು." "ಆತನ ಆಳ್ವಿಕೆಯು ಶಾಶ್ವತ, ಆತನ ರಾಜ್ಯವು ತಲಾ ತಲಾಂತರಕ್ಕೂ ನಿಲ್ಲುವದು" ಭೂನಿವಾಸಿಗಳೆಲ್ಲರು ಏನು ಅಲ್ಲದಂತಿದ್ದಾರೆ ಅಂದನು (ದಾನಿಯೇಲ 4:37). ಎಂಬುದನ್ನು ಗಮನಿಸಿ, ಆ ವಾಖ್ಯಾನದ ಸತ್ಯಾಂಶವನ್ನು ನಾವು ಧ್ಯಾನಿಸುತ್ತೇವೆ.

ಹೊಸ ಒಡಂಬಡಿಕೆಯಲ್ಲಿನ ಮೊದಲ ಅರಸನಾದ ಅಗ್ರಿಪ್ಪನು, ನೆಬೂಕದ್ನೆಚರನಲ್ಲಿ ಹೋಲಿಕೆಯಾಗಿರುವನು. ಈ ಹೆರೋದನೆ ಯಾಕೋಬನನ್ನು ಸಂಹರಿಸಿದ್ದನು, ಪೇತ್ರನನ್ನು ಮರಣಕ್ಕಾಗಿ ಹಿಡಿಸಿದ್ದನು ಕೂಡ ಈ ಹೆರೋದನೆ. "ಅವನು ದೇವರ ಸ್ಥಾನವನ್ನು" ಹೊಂದಲು ಅಪೇಕ್ಷಿಸಿದಾಗ, ದೇವರು ಅವನನ್ನು ತಗ್ಗಿಸಿದನು.

### ಹೆರೋದನ ಕುಟುಂಬ

ಮೊದಲನೆಯ ಹೆರೋದ ಅಗ್ರಿಪ್ಪನನ್ನು ಅರ್ಥಮಾಡಿಕೊಳ್ಳಲು, ನಾವು ಅವನ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕಾದಂತಹ ಅವಶ್ಯಕೆಯಿದೆ. ಅವನು "ತಾನೇ ದೇವರೆಂದು ಭಾವಿಸಿಕೊಂಡಿದ್ದನು" ಯಾಕೆಂದರೆ ಅವನು, ತಾವೆಲ್ಲರೂ ದೇವರುಗಳೆಂದು[2] ತಿಳಿದುಕೊಂಡಿದ್ದಂತಹ *ಕುಟುಂಬದ* ಹಿನ್ನೆಲೆಯಿಂದ ಬಂದವನಾಗಿದ್ದನು. ಅವರ ಕುಟುಂಬದವರು ಹೆರೋದನ ಸಂತಾನದವರಾಗಿದ್ದರು - ಇವರು ಯೇಸುವಿನ ಜೀವಿ

ತಕ್ಕೂ ಮತ್ತು ಪ್ರಾರಂಭದಲ್ಲಿದ್ದಂತಹ ಶಿಷ್ಯರನ್ನು ಪುನಃ ಪುನಃ ಬಾಧಿಸಿದರು.

ಹೊಸ ಒಡಂಬಡಿಕೆಯಲ್ಲಿ ಸುಮಾರು ಹನ್ನೊಂದು ಜನ ಹೆರೋದ್ಯರ ಕುರಿತು ಬರೆಯಲ್ಪಟ್ಟು, ಹತ್ತು ಜನರ ಹೆಸರನ್ನು ನಮೂದಿಸಲಾಗಿದೆ. "ಹೆರೋದನು" ಎಂಬ ನಾಮಾಂಕಿತದಿಂದಲೇ ಅವರು, ಯಾರು ಎಂದು ನೀವು ಗ್ರಹಿಸಿಕೊಳ್ಳ ಬಹುದು. ಅನೇಕರು "ಹೆರೋದ" ಎಂಬ ನಾಮಾಂಕಿತವನ್ನು ಹೊಂದಿದ್ದರೂ, ಈ ಕುಟುಂಬದೊಂದಿಗೆ ಅವರನ್ನು ಹೋಲಿಸಲಾಗದು. ಈ ಅಗ್ರಿಪ್ಪರಾಜನ ಕುರಿತು, ಅವನ ಕುಟುಂಬದ ಮರದಿಂದ ಉದ್ಭವಿಸಿರುವ ಕೊಂಬೆಗಳ ಮೂಲಕ ಅರಿತುಕೊಳ್ಳೋಣ:[3]

ಮೊದಲನೆಯ ಹೆರೋದ ಅಗ್ರಿಪ್ಪನ ತಾತನಾದ ಗ್ರೇಟ್ ಹೆರೋದನಿಂದ ನಮ್ಮ ಸಮೀಕ್ಷೆಯನ್ನು ಪ್ರಾರಂಭಿಸೋಣ. ಹೆರೋದ ಮಹಾರಾಜನನ್ನು (ಸರಳವಾಗಿ ಲೂಕ 1:5; ಹೆರೋದ ಎಂಬ ಸರಳನಾಮ ಹೆರೋದ ಎನ್ನಲಾಗಿದೆ) ಅವನ ಒಳ್ಳೆಯ ಪರಿಚಿತಿಯು ಯೇಸು ಜನಿಸಿದಾಗ, ಚಿಕ್ಕ ಮಕ್ಕಳ ಸಂಹಾರಮಾಡಿದವನು (ಮತ್ತಾಯ 2:1-19). ಅವನು ಯೆದೋಮ್ಯನಾಗಿದ್ದನು,[4] ಅವನು ಏಸಾವನ ಸಂತಾನದವನು. ಯೆಹೂದ್ಯ ಸ್ವತಂತ್ರ ಹೋರಾಟಗಾರರಾದ ಮೆಕ್ಕಾಬೀಸ್ ಜನರು,[5] ಎದೋಮ್ಯರನ್ನು ಹತೋಟಿಯಲ್ಲಿಟ್ಟಿದ್ದರು. ಯೆದೋಮ್ಯಗಂಡಸರನ್ನು ಸುನ್ನತಿಗೆ ಒಳಪಡಿಸಿದ್ದರು. ಈ ಒಂದು ಒರಟಾದ ತಿಳುವಳಿಕೆಯಿಂದ ಅವರು ಯೆಹೂದ್ಯರು ಅಥವಾ ಯೆಹೂದ್ಯರಿಗೆ ಸಂಬಂಧಪಟ್ಟವರು ಎಂದು ನಿರ್ಣಯಿಸಲಾಗಿದೆ. ಹೇಗೂ, ಹೆರೋದನು ಯೂದಾಯ ಮತದಲ್ಲಿ ಮದುವೆಯಾಗಿದ್ದನು; ಮರಿಯಮ್ನೆ ಎಂಬ ಯೆಹೂದ್ಯಳು ಅವನ ಹತ್ತನೇ ಹೆಂಡತಿಯಾಗಿದ್ದಳು, ಮೆಕ್ಕಾಬೀಸರ ಸಂತಾನದ ರಾಣಿಯಾಗಿದ್ದಳು.

ಅವನು ಯೌವನಸ್ತನಾಗಿರುವಾಗಲೇ, ಮಹಾ ಹೆರೋದನು ಗಲಿಲಾಯದ ರಾಜ್ಯಪಾಲನಾಗಿದ್ದನು. ಕ್ರಮೇಣವಾಗಿ, ಅವನಿಗೆ ಇತರ ಪ್ರದೇಶಗಳ ಅಧಿಕಾರವನ್ನು ನೀಡಲಾಯಿತು, ಅದರ ಸಂಗಡ ಅರಸನೆಂಬ ನಾಮಾಂಕಿತವನ್ನು ನೀಡಲಾಯಿತ್ತು. ಯೆಹೂದ್ಯರಲ್ಲಿ ಅವನು ಪ್ರಖ್ಯಾತನಾಗಿರಲಿಲ್ಲ, ಆದರೆ ಹೆರೋದಿಯರ ಒಂದು ಗುಂಪು ಅಭಿವೃದ್ಧಿಗೊಂಡಿತು. ಧಾರ್ಮಿಕ ಗುಂಪು ಹಾಗೂ ರಾಜಕೀಯ ಗುಂಪು ಎಂದಾಯಿತು (ಮತ್ತಾಯ 22:16; ಮಾರ್ಕ 3:6; 12:13).

ಹೆರೋದನು ಕಟ್ಟಡಗಳ ನಿರ್ಮಾಣಕ್ಕೆ ಪ್ರಖ್ಯಾತಿಗೊಂಡಿದ್ದನು,[6] ಅವನು ಯೆರೂಸಲೇಮಿನ ದೇವಾಲಯವನ್ನು ಪುನಃ ನಿರ್ಮಾಣಮಾಡಿದ ಕೀರ್ತಿಯನ್ನು ಹೊಂದಿದ್ದನು.[7] ಮತ್ತು ಅವನು ತನ್ನ ವೈರಿಗಳ ಕುರಿತು ಮಾನಸಿಕ ಅವ್ಯವಸ್ಥೆಯಿಂದುಂಟಾಗುವ ಭ್ರಮೆಯನ್ನು ಹೊಂದಿದ್ದನು. ಮೆಕ್ಕಾ ಬೀಸರ ಏಳಿಗೆಯ ಬಗ್ಗೆ ಭಯಭೀತನಾಗಿದ್ದನು,[8] ಆದ್ದರಿಂದ ಅವರನ್ನು ಕ್ರಮವಾಗಿ ಹಿನ್ನೆಡೆಗೆ ನಡಿಸುತ್ತಿದ್ದನು, ಮತ್ತು ಮರಿಯಾಮ್ನೆಯ ಎರಡು ಪುತ್ರರನ್ನು ಸಂಹರಿಸಿದ್ದನು. (ಒಬ್ಬನು ತನ್ನ ಮಕ್ಕಳನ್ನೇ ಕೊಲ್ಲುವುದಾದರೆ, ಇತರೆ ಮಕ್ಕಳನ್ನು ಸರಳವಾಗಿ ಕೊಲ್ಲುವನು!) ಸಹಜವಾಗಿ, ಅವನಿಗೆ ಇದ್ದಂಥ ಮರಿಯಾಮ್ನೆ ಎಂಬ ಹೆಂಡತಿಯನ್ನು ಸಹ ಕೊಂದು ಹಾಕಿದ್ದನು. ಅವಳು ಅವನ ಪ್ರೀತಿಯ ಹೆಂಡತಿಯಾಗಿದ್ದಳು.

ಹೆರೋದ ಮಹಾರಾಜನು ಮೂವತ್ತು ಏಳು ವರುಷ ರಾಜ್ಯಭಾರ ಮಾಡಿದ್ದನು, ಆದರೆ ಅಂತ್ಯದಲ್ಲಿ ಗುಣವಾಗದ ರೋಗಕ್ಕೆ ತುತ್ತಾಗಿ ಮರಣ ಹೊಂದಿದನು (ಮತ್ತಾಯ 2:19, 20 ಅವನ ಮರಣದ ಕುರಿತು ತಿಳಿಸುತ್ತದೆ). ಅವನ ಮರಣದ ನಂತರ, ರೋಮ ಸಾಮ್ರಾಜ್ಯವು ನಾಲ್ಕು ಭಾಗವಾಯಿತು. ಪ್ರತಿ ಭಾಗವನ್ನು ಒಬ್ಬ ಟೆಟ್ರಾಚನು ಆಳುತ್ತಿದ್ದನು ("ನಾಲ್ಕನೇ ಅಂಶ ಆಡಳಿತಗಾರನು")[9] ಹೆರೋದನ ಮೂರು ಮಕ್ಕಳು (ಮೊದಲ ಅಗ್ರಿಪ್ಪರಾಜನ ಚಿಕ್ಕಪ್ಪಂದರು) ಒಂದೊಂದು ಭಾಗವನ್ನು ಹೊಂದಿಕೊಂಡರು, ನಾಲ್ಕನೆಯ ಭಾಗವನ್ನು, ಹೆರೋದ ನಾಗುವವನಾದ ಲುಸಸ್ಯನಿಗೆ (ಲೂಕ 3:1) ಆಡಳಿತಕ್ಕೆ ನೀಡಲಾಯಿತು.

ಅರ್ಕೇಲಸ್ ಎಂಬ ಒಬ್ಬ ಮಗನನ್ನು ಯುದಾಯ, ಸಮಾರ್ಯ, ಹಾಗು ಇದು

ಮಾಯ (ಎದೋಮ್)ಗಳಿಗೆ ಟೆಟ್ರಾರ್ಚ್‌ನನ್ನಾಗಿ ನೇಮಿಸಲಾಯಿತು. ಅವನು ದುಷ್ಟ ಚಕ್ರವರ್ತಿಯಾಗಿದ್ದನು. ಈ ಅರ್ಕಿಲನಿಗೆ ಭಯಗೊಂಡು, ಯೋಸೇಫ, ಮರಿಯಳು, ಹಾಗೂ ಯೇಸು, ಯೆರೂಸಲೇಮಿಗೆ ಹಿಂದಿರುಗಲಿಲ್ಲ. ಅದು ಅರ್ಕೇಲನ ಆಡಳಿತ ಪ್ರದೇಶವಾಗಿತ್ತು. ಆದರೆ ಅವರು ಗಲಿಲಾಯದ ನಜರೇತಿಗೆ ಹೋದರು (ಮತ್ತಾಯ 2:19-23). ಅಕೇಲಸ್‌ನು ಯೆಹೂದ್ಯರನ್ನು ಬಹುವಾಗಿ ಹಿಂಸಿಸಿದ್ದರಿಂದ ಅವನನ್ನು ಕ್ರಿ.ಶ. 6ರಲ್ಲಿ ಗಾಲ್ ಪ್ರದೇಶಕ್ಕೆ ಕಳುಹಿಸಲ್ಪಟ್ಟನು. ರೋಮಾ ಸಾಮ್ರಾಜ್ಯವು ಆ ಪ್ರದೇಶಕ್ಕೆ ಅನೇಕ ಆಡಳಿತಗಾರರನ್ನು ನೇಮಿಸಿತು (ಪೊಂತದ ಪಿಲಾತನು ಐದನೆಯವನು ಲೂಕ 3:1).

ಹೆರೋದ ಅಂತಿಪನೆಂಬ, ಮತ್ತೊಬ್ಬ ಮಗನು (ಲೂಕ 8:3ರಲ್ಲಿ, ಹೆರೋದನೆಂದು) ಗಲಿಲಾಯ ಹಾಗು ಪೆರಿಯದ ಉಪರಾಜನಾದನು (ಮತ್ತಾಯ 14:1; ಲೂಕ 3:1, 19; 9:7; ಅಪೊಸ್ತಲರ ಕೃತ್ಯಗಳು 13:1). ಅವನು ಯೇಸುವಿನ ಜೀವಿತಕಾಲದಲ್ಲಿ, ಅರಸನಾಗಿದ್ದರಿಂದ ಪ್ರಖ್ಯಾತಿಗೊಂಡಿದ್ದನು (ಯೇಸು ಸೇವೆ ಮಾಡಿದ ಗಲಿಲಾಯವನ್ನು ಆಳಿದನು). ದೇವರ ವಾಕ್ಯವು ಅವನು ನರಿಬುದ್ಧಿವುಳ್ಳವನಾಗಿದ್ದನು ಎಂದು ಹೇಳುತ್ತದೆ (ಲೂಕ 13:31, 32), ಅವನು ಮೂಢನಂಬಿಕೆಯುಳ್ಳವನಾಗಿದ್ದನು (ಮತ್ತಾಯ 14:1, 2; ಇದನ್ನು ನೋಡಿರಿ ಲೂಕ 9:7-9) ಅವನು ಅನೈತಿಕ ವರ್ಚಸ್ಸನ್ನು ಹೊಂದಿದ್ದನು (ಮಾರ್ಕ 8:15). ದುರಾಶೆವುಳ್ಳವನಾಗಿ, ಒಬ್ಬ ಹೆಂಡತಿಯನ್ನು ತೊರೆದಿದ್ದನು.[10] ಮತ್ತು ತನ್ನ ಅಣ್ಣನ ಮಗಳನ್ನು ಇಟ್ಟುಕೊಂಡಿದ್ದನು.[11] ಸ್ನಾನಿಕನಾದ ಯೋಹಾನನು ಈ ಪಾಪದ ಕುರಿತು ತಿಳಿಸಿದಾಗ, ಅವನು ತನ್ನ ತಲೆಯನ್ನೇ ಕಳಕೊಂಡನು (ಮತ್ತಾಯ 14:1-12; ಮಾರ್ಕ 6:14-29). ನಂತರ ಯೇಸುವಿನ ನ್ಯಾಯ ವಿಚಾರಣೆಗೆ, ಪಿಲಾತನು ಆತನನ್ನು ಹೆರೂದನಾದ ಅಂತಿಪನ ಬಳಿಗೆ ಕಳುಹಿಸಿದನು ಮತ್ತು ಆ ಅರಸನು ಯೇಸುವನ್ನು ಹಿಂಸೆಗೆ ಒಳಪಡಿಸಿದನು (ಲೂಕ 23:7-12, 15; ಇದನ್ನು ನೋಡಿರಿ ಅಪೊಸ್ತಲರ ಕೃತ್ಯಗಳು 4:27). ಅವನ ದುರಾಡಳಿತದ ದೆಸೆಯಿಂದ ಅಂತಿಮವಾಗಿ ಗಾಲ್‌ಗೆ ಹೊಯ್ಯಲ್ಪಟ್ಟು, ಅಲ್ಲಿ ಅತ್ಯಂತವಾಗಿ ದುರ್ಮರಣ ಹೊಂದಿದನು.

ಎರಡನೆಯ ಫಿಲಿಪ್ಪನು, ಹೆರೋದ ಮಹಾರಾಜನ ಮೂರನೆಯ ಮಗನಾಗಿದ್ದನು ಅವನು ಇತರಾಯ ಹಾಗೂ ತ್ರಕೋನೀತಿಸ್‌ಗೆ[12] ಉಪರಾಜನಾಗಿದ್ದನು. ಲೂಕ 3:1 ರಲ್ಲಿರುವ ಫಿಲಿಪ್ಪನು ಇವನೇ. ಇತರೆ ಯೆರೋದ್ಯರಂತೆ[13] ಅವನು ಸಹ ದುಷ್ಟನಾಗಿರಲಿಲ್ಲ. ಹೆರೋದ ಮಹಾರಾಜನು ಫಿಲಿಪ್ಪನೆಂಬ ಇನ್ನೊಬ್ಬ ಮಗನನ್ನು ಸಹ ಹೊಂದಿದ್ದನು. ("ಒಂದನೇ ಫಿಲಿಪ್ಪನನ್ನು") ಹೊಸ ಒಡಂಬಡಿಕೆಯಲ್ಲಿ ಅವನನ್ನು ಸರಳವಾಗಿ "ಫಿಲಿಪ್ಪನೆಂದು" ಕರೆಯುತ್ತಿದ್ದರು. ಅವನು ಹೆರೋದಿಯಳ ಮೊದಲಗಂಡನಾಗಿದ್ದನು (ಮತ್ತಾಯ 14:3; ಮಾರ್ಕ 6:17; ಲೂಕ 3:19), ಹೆರೊದಿಯಳ ಮಗಳಾದ ಸಲೋಮಿಯ ತಂದೆ.

ಇದು ನಮ್ಮನ್ನು ಮೊದಲನೆಯ ಹೆರೋದನಾದ ಅಗ್ರಿಪ್ಪನ ಬಳಿಗೆ ತರುತ್ತದೆ - ಹೆರೋದ ಮಹಾರಾಜನ ಮೊಮ್ಮಗನು; ಅರ್ಕೇಲನ, ಹೆರೋದ ಅಂತಿಪನ, ಹೆರೋದನಾದ ಫಿಲಿಪ್ಪಿ II, ಮತ್ತು ಹೆರೋದ ಫಿಲಿಪ್ಪ I ಅರಿಸೋಬಲನ ಅಣ್ಣನಮಗನು (ವಾಕ್ಯದಲ್ಲಿ ದಾಖಲಾಗಿರುವದಿಲ್ಲ).[14] ಮೊದಲ ಹೆರೋದನಾದ ಅಗ್ರಿಪ್ಪನನ್ನು, ಅಪೊಸ್ತಲರ ಕೃತ್ಯಗಳು 12ರಲ್ಲಿ ಸರಳವಾಗಿ "ಹೆರೋದನು" ಎಂದು ಕರೆಯಲಾಗಿದೆ. ಸ್ವಲ್ಪ ಕ್ಷಣಗಳಲ್ಲಿಯೇ, ಅವನ ಜೀವನದ ಕುರಿತು ಕಲಿಯೋಣ, ಅದರ ಮೊದಲು ವಾಕ್ಯ ದಲ್ಲಿರುವ ಹೆರೋದನ ಕುಟುಂಬದ ಕುರಿತಾಗಿ ಅಂತಿಮವಾಗಿ ತಿಳಿಯೋಣ.

ಮೊದಲನೆಯ ಹೆರೋದನಾದ ಅಗ್ರಿಪ್ಪನು ಹೆರೋದಿಯಳೆಂಬ ಒಬ್ಬ ಸಹೋದರಿಯನ್ನು ಹೊಂದಿದ್ದನು (ಅವನನ್ನು ಗಮನಿಸಿರುವೆವು) ಅವಳು ಮೊದಲ ಚಿಕ್ಕಪ್ಪನನ್ನು ಮತ್ತು ಇನ್ನೊಬ್ಬನನ್ನು ಮದುವೆಯಾಗಿದ್ದಳು. ಆಕೆಯ ಹೆಸರನ್ನು ಮತ್ತಾಯ 14:3, 6; ಮಾರ್ಕ 6:17, 19, 22; ಮತ್ತು ಲೂಕ 3:19 ನೋಡುತ್ತೇವೆ. ತನ್ನ ಚಿಕ್ಕಪ್ಪನಾದ I ಫಿಲಿಪ್ಪದಿಂದ ಸಲೋಮೆ ಎಂಬ ಮಗಳನ್ನು ಪಡೆದಿದ್ದಳು. ಹೆರೊದ್ಯಳ ಎರಡನೆಯು ಗಂಡನಾದ ಹೆರೋದನ ಮುಂದೆ

ಸಲೋಮೆಯು ನೃತ್ಯಮಾಡಿದ್ದಳು. ನಂತರ (ತಾಯಿಯ ಪ್ರೇರಣೆಯಿಂದ) ಸ್ನಾನಿಕನಾದ ಯೋಹಾನನ ತಲೆಗಾಗಿ ಮನವಿ ಮಾಡಿದಳು. ಅವಳು ಯಾರೆಂದು ತಿಳಿದರು, ಅವಳ ಹೆಸರನ್ನು ದಾಖಲು ಮಾಡಿರುವದಿಲ್ಲ, ಮತ್ತಾಯ 14:6-11; ಮತ್ತು ಮಾರ್ಕ 6:22-28.

ಮೊದಲ ಹೆರೋದ ಅಗ್ರಿಪ್ಪರಾಜನು ನಾಲ್ಕು ಮಕ್ಕಳನ್ನು ಹೊಂದಿದ್ದನು, ಅಪೊಸ್ತಲ ಕೃತ್ಯದ ಮುಂದಿನ ಅಧ್ಯಯನದಲ್ಲಿ ಇವರನ್ನು ಪುನಃ ಸಂಧಿಸೋಣ: ದ್ರೊಸಿಲ್ಲಾ, ಫೆಲಿಕ್ಸನ ಹೆಂಡತಿ, ರೋಮಾಯದ ಅಧಿಕಾರಿ (24:24); ಹೆರೋದನಾದ ಅಗ್ರಿಪ್ಪನು II (ಅಗ್ರಿಪ್ಪನೆಂಬವನು 25:13-26:32); ಮತ್ತು ಬೆರ್ನಿಸ್ (25:13), ಅಗ್ರಿಪ್ಪನೊಂದಿಗಿದ್ದ ಅವಳ ಸಂಬಂಧವು, ಅನ್ಯರಿಗೂ ದಿಗ್ಭ್ರಮೆ ಉಂಟಾಗಿತ್ತು.

ಹೊಸ ಒಡಬಡಿಕೆಯಲ್ಲಿನ ಹೆರೋದನ ಕುರಿತಾದ ಸಂಗತಿಯು ಇದಾಗಿರುತ್ತದೆ. ಅವರ ದೊಡ್ಡಸ್ತಿಕೆ - ಹಾಗು ಹಿನ್ನಡೆಯ ಕುರಿತು ನಾನು ಅಧ್ಯಯನ ಮಾಡಿರುವದಿಲ್ಲ, ಆದರೆ ಈಗಾಗಲೇ ಅರಿತಿರುವ ವಿಷಯಗಳಿಂದ, ಅವರುಗಳು ತಮ್ಮ ದುರಾಶೆಯನ್ನು ತೃಪ್ತಿ ಪಡಸಿಕೊಳ್ಳುವದಕ್ಕೋಸ್ಕರ ತಮ್ಮ ಕುಯುಕ್ತಿಯನ್ನು ಉಪಯೋಗಿಸಿದ ಕುಟುಂಬವಾಗಿದ್ದಾರೆ. ಹರೋದ್ಯರ ಕುರಿತು *The International Standard Bible Encyclopedia* ತಿಳಿಸುವಂತೆ:

> "ಹೆರೋದನು" ಎಂಬ ಹೆಸರು ನಾಯಕತ್ವದ ಹೆಸರಾದರೂ, ಅದು ಕುಟುಂಬಕ್ಕೆ ಯೋಗ್ಯವಾದದ್ದಲ್ಲ, ಅದನ್ನು ಅವರು ದುರ್ಬುದ್ಧಿಯಿಂದ ಪಡೆದರೆ ವಿನಃ ನಾಯಕತ್ವದಿಂದಲ್ಲ. ಅವನ ಇತಿಹಾಸದಲ್ಲಿ ಮಹತ್ವದ ಯೋಗ್ಯತೆಯನ್ನು ಅವರು ಪಡೆದವರಲ್ಲ, ಅವರಲ್ಲಿ ಕಾಣಬರುವ ಯಾವುದೇ ಯೋಗ್ಯತೆಗಳು, ಅವರ ಕುಯುಕ್ತಿಯ ದೆಸೆಯಿಂದ ಅವರ ಕುಟುಂಬದ ಬೇರುಗಳನ್ನು ಕೀಳು ದರ್ಜೆಗೆ ನಡಿಸಿತು. ಅವರಲ್ಲಿದ ಹೆರೋದ್ಯ ರಾಣಿಯರು ವಿಶೇಷ ವರ್ಚಸ್ಸನ್ನು ಹೊಂದಿದ್ದರು, ಆದರೆ ಅವರ ವರ್ಚಸ್ಸನ್ನು ಅಯೋಗ್ಯ ಕಾರ್ಯಕ್ಕೆ ಬಳಸಿದರು, ಇಸ್ರಾಯೇಲ್ಯರ ನಡುವೆ ಯಾವುದೇ ಯೋಗ್ಯವಾದ ಸಾಕ್ಷಿಯನ್ನು ಅವರು ಬಿಡಲಿಲ್ಲ ಅವರು ಜಗಳವಾಡುವವರೂ, ಸಂದೇಹಪಡುವವರೂ, ಒಳಸಂಚು, ಹಾಗು ಅನೈತಿಕ ಜೀವನವನ್ನು ಹೊಂದಿದ ಕುಟುಂಬದವಾಗಿದ್ದರು.[15]

## ಹೆರೋದ್ಯರ ಸೋಲುಗಳು (12:1-3, 18-23)

I ಹೆರೋದ ಅಗ್ರಿಪ್ಪನ ಹಿನ್ನೆಲೆ ಹಾಗೂ ಅದರ ಬೇರು ಮತ್ತು ಫಲಗಳ ವಿಷಯವನ್ನು ಗ್ರಹಿಸಿಕೊಂಡವರಾಗಿ, ಅವನ ವೈಯಕ್ತಿಕವಾದ ಚರಿತ್ರೆಯನ್ನು ಪುನರಾವರ್ತಿಸೋಣ.

ಮರಿಯಾಮ್ನೆಯ ಮಕ್ಕಳಲ್ಲಿ ಒಬ್ಬನಾದ ಹರಿಸ್ಟೋಬೂಲಸ್‌ನನ್ನು ಹೆರೋದ್ಯ ಮಹಾರಾಜನು ಸಂಹರಿಸಿದ್ದನು. ಹರಿಸ್ಟೋಬೂಲಸನು ಸಂಹಾರವಾದಾಗ, ಹೆರೋದ ಅಗ್ರಪ್ಪನೆಂಬ ನಾಲ್ಕು ವರ್ಷದ ಮಗನಿದ್ದನು.[16] ಅವನನ್ನು ರಕ್ಷಿಸುವದಕ್ಕಾಗಿ ಮರಿಯಾಮ್ನೆಯು ಅವನನ್ನು ರೋಮಾಯಕ್ಕೆ ಕಳುಹಿಸಿದಳು ಅಲ್ಲಿ ಅವನು ಅರಮನೆಯಲ್ಲಿ ವೃದ್ಧಿಯಾದನು. ರಾಜ ಕುಟುಂಬದ ಸ್ನೇಹಿತರಲ್ಲಿ ಕ್ಲಾಡಿಯಸ್ ಮತ್ತು ಕೆಎಸ್ ಕಲಿಗುಲ ಎಂಬವರಿದ್ದರು. ಕಲಿಗುಲನು ಸಿಂಹಾಸನವನ್ನೇರಿದಾಗ, ಅವನ ಚಿಕ್ಕಪ್ಪನನ್ನು ಉಪರಾಜನನ್ನಾಗಿ ಮಾಡಿದನು, ಆ ಸಮಯದಲ್ಲಿ ಅವನ ಚಿಕ್ಕಪ್ಪನು ತೀರಿಕೊಂಡು ಮೂರು ವರ್ಷಗಳಾಗಿತ್ತು. ಅವನ ಚಿಕ್ಕಪ್ಪನಾದ ಹೆರೋದ ಅಂತಿಪನು ನಿರ್ನಾಮವಾದಾಗ, ಕಲಿಗುಲನು ಹೆರೋದ ಅಗ್ರಿಪ್ಪನಿಗೆ ಅವನ ರಾಜ್ಯವನ್ನು ನೀಡಿದನು. ಕಲಿಗುಲನು ಕ್ಲಾಡಿಯಸನ ಸಿಂಹಾನವನ್ನೇರಿದನು, ಆ ಹೊಸ ಚಕ್ರವರ್ತಿಯ ಹೆರೋದ ಅಗ್ರಿಪ್ಪನಿಗೆ ಅಧಿಕಾರಿಗಳಿಂದ ಆಡಳಿತಕ್ಕೆ ಒಳಪಟ್ಟಿದ್ದ ಯೂದಾಯ, ಸಮಾರಿಯ, ಮತ್ತು ಇದು ಮಾಯವನ್ನು ಹೆರೋದ ಅಗ್ರಿಪ್ಪನ ಆಡಳಿಕ್ಕೆ ನೀಡಿದನು. ಈ ರೀತಿಯಾಗಿ ಹೆರೋದ ಅಗ್ರಿಪ್ಪನು ಹೆರೋದ ಮಹಾರಾಜನ ಪ್ರದೇಶಗಳನ್ನು ವಶ

ಮಾಡಿಕೊಂಡನು. "ಸೊಲೋಮೋನನ ದಿವಸಗಳಲ್ಲಿ ಯೆಹೂದ್ಯ ಅರಸುಗಳ ಆಡಳಿತಕ್ಕಿಂತ ಹೆಚ್ಚಾದ ಆಡಳಿತವನ್ನು ಇವನು ಮಾಡಿದನು."[17]

ರೋಮಾ ಸಾಮ್ರಾಜ್ಯದಲ್ಲಿ, ಮೊದಲನೆಯ ಬಾರಿಗೆ ಯೆಹೂದ್ಯ ರಕ್ತವನ್ನು ಹೊಂದಿದ್ದ ವ್ಯಕ್ತಿಯು ಅಧಿಕಾರಕ್ಕೆ ಬಂದನು.[18] ಅವನು ವೈಯಕ್ತಿಕವಾಗಿ ರೋಮಾಯರ ಪದ್ಧತಿಗಳನ್ನು ಅನುಸರಿಸುತ್ತಿದ್ದನು. ಬಹಿರಂಗವಾಗಿ ಯೆಹೂದ್ಯರ ಆಚಾರ ಪದ್ಧತಿಗಳನ್ನು ಮುಂದುವರಿಸಿದ್ದನು. ಅದು ರಾಜಕೀಯ ಸನ್ನಿವೇಶವಾದ್ದದರಿಂದ ಯೆಹೂದ್ಯರ ತಕರಾರುಗಳಿಗೆ ಯುಕ್ತಿಯಿಂದ ವರ್ತಿಸಿ, ರೋಮಾಯರ ಮತ್ತು ಯೆಹೂದ್ಯರ ನಡುವೆ ಗೊಂದಲ ಉಂಟುಮಾಡಿದ್ದನು. ಪಾಲಿಸ್ತೇನಿನಲ್ಲಿ ಅವನು "ವರ್ಷದ ವ್ಯಕ್ತಿಯಾಗಲು" ಅನರ್ಹನಾಗಿದ್ದನು, ಆದರೆ ಇತರ ಹೆರೋದ್ಯರಿಗಿಂತ ಇವನು ಪ್ರಖ್ಯಾತಿ ಹೊಂದಿದ್ದನು ಸಭೆಯನ್ನು ಹಿಂಸಿಸುವುದರ ಮೂಲಕ ಯೆಹೂದ್ಯರ ಮೆಚ್ಚುಗೆಗೆ ಪಾತ್ರನಾಗಿದ್ದನು.

ಅಪೊಸ್ತಲರ ಕೃತ್ಯಗಳು 12ರಲ್ಲಿರುವ, ಘಟನೆಯ ಸಮಯದಲ್ಲಿ ಅವನು ಪೂರ್ಣ ಅಧಿಕಾರವನ್ನು ಹೊಂದಿದ್ದನು. ಅಧ್ಯಾಯದ ಅಂತ್ಯದಲ್ಲಿ ಅವನು "ದೇವರು ಎಂಬ ನಾಮಾಂಕಿತಕ್ಕೆ ತನ್ನ ಹೆಸರನ್ನು ಬದಲಿಸಿಕೊಂಡನು ಆದರೆ ಜನರು ಅವನನ್ನು ಆ ಹೆಸರಿನಿಂದ ಕರೆಯುವ ಮೊದಲೆ ತಾನು ದೇವನಾಗಿದ್ದನು ಎಂದು ತಿಳುಕೊಂಡಿದ್ದನು." ಅಪೊಸ್ತಲರ ಕೃತ್ಯಗಳು 12ರಲ್ಲಿ ಅವನನ್ನು ಮೂರು ವಿಧವಾಗಿ ಚಿತ್ತರಿಸಲಾಗಿದೆ; ಪ್ರತಿಯೊಂದರಲ್ಲೂ, "ತಾನು, ದೇವರೆಂದು ಭಾವಿಸಿದ ಮನುಷ್ಯನು" ಎಂಬದ್ದನ್ನು ಗಮನಿಸುತ್ತೇವೆ.

ಮೊದಲನೆಯ ಚಿತ್ರಣದಲ್ಲಿ (ಹಿಂದಿನ ಪಾಠದಲ್ಲಿ ತಿಳಿದಂತೆ), ಹೆರೋದನು ಯಾಕೋಬನನ್ನು ಕೊಲ್ಲಲು ಹಾಗೂ ಯಹೂದ್ಯರನ್ನು ಮೆಚ್ಚಿಸಲು ಪೇತ್ರನನ್ನು ಹಿಡಿಯುವಂತೆ ಅದೇಶವನ್ನು ನೀಡಿದ್ದನು:

> ಆ ಸಮಯದಲ್ಲೇ ಅರಸನಾದ ಹೆರೋದನು ಸಭೆಯವರಲ್ಲಿ ಕೆಲವರನ್ನು ಹಿಂಸೆಪಡಿಸುವದಕ್ಕೆ ಕೈ ಹಾಕಿ ಯೋಹಾನ ಅಣ್ಣನಾದ ಯಾಕೋಬನನ್ನು ಕತ್ತಿಯಿಂದ ಕೊಲ್ಲಿಸಿದನು. ಇದು ಯೆಹೂದ್ಯರಿಗೆ ಮೆಚ್ಚಿಕೆಯಾಗಿದೆ ಎಂದು ನೋಡಿ ಅಷ್ಟಕ್ಕೆ ನಿಲ್ಲದೆ ಪೇತ್ರನನ್ನೂ ಹಿಡಿಸಿದನು. ಆ ಕಾಲದಲ್ಲಿ ಹುಳಿಯಿಲ್ಲದ ರೊಟ್ಟಿಯ ಹಬ್ಬ ನಡೆಯುತ್ತಿತ್ತು ... (ವಚನಗಳು 1-3).

ಯುದಾಯ ಧರ್ಮವನ್ನು ಕಾಪಾಡಲು ಅಥವಾ ಕ್ರೈಸ್ತರನ್ನು ಪಶುಗಳಂತೆ ಹಿಂಸಿಸಲು ಅವನಲ್ಲಿ ಇದ್ದ ದ್ವೇಷದ ಸೂಚನೆಯು ಇಲ್ಲಿರುವದಿಲ್ಲ. ಅವನು ಅದನ್ನು ರಾಜಕೀಯದ ಕಾರ್ಯವೆಂದು ತಿಳಿದು ಮಾಡಿದನು. ಹೆರೋದ್ಯರ ಕುಟುಂಬಕ್ಕೂ ಯೇಸುವಿನ ಮತ್ತು ಆತನ ಅನುಯಾಯಿಗಳ ನಡುವೆ ಇದ್ದ ವಿಸ್ತಾರವಾದ ಸಂಬಂಧದ ನಿಮಿತ್ತವಾಗಿ ಯೇಸುವಿಗೆ ನೀಡಿದ ನ್ಯಾಯತೀರ್ಪಿನ ಕುರಿತು ಯಾವುದೇ ತಾರತಮ್ಯವನ್ನು ಮಾಡಿರಲಿಲ್ಲ.[19] ಹೆರೋದ್ಯರು, ಕ್ರೈಸ್ತರನ್ನು ನಿರ್ನಾಮ ಮಾಡಬೇಕೆಂಬ ಅಭಿಲಾಶೆಯನ್ನು ಹೊಂದಿರಲಿಲ್ಲ. ಅವರು ತಮ್ಮ ಸ್ವಾರ್ಥಕ್ಕಾಗಿ ಇತರರಿಗೆ ಮೌನವಾದ ಹಿಂಸೆಯನ್ನು ನೀಡುತ್ತಿದ್ದರು. ಇಂಥ ಕ್ರಿಯೆಗಳಿಂದ ಅಪೊಸ್ತಲರನ್ನು ಹಿಂಸಿಸಿ, "ನಾನು ದೇವರಾಗಿರುವದರಿಂದ, ನಾನು *ಸರ್ವಶಕ್ತ* ಎಂದು ಹೆರೋದನು ಹೇಳಿ,[20] ನಾನು ಏನನ್ನಾದರೂ ಮಾಡಬಲ್ಲೆ ಎಂದನು!"

ಅಪೊಸ್ತಲರ ಕೃತ್ಯಗಳು 12ರ ಎರಡನೆಯ ಚಿತ್ರಣದಲ್ಲಿ ಪೇತ್ರನು ಸೆರೆಮನೆಯಿಂದ ಅದ್ಭುತವಾಗಿ ಬಿಡುಗಡೆಗೊಂಡಿದ್ದನು. "ಬೆಳಗಾದ ಮೇಲೆ ಪೇತ್ರನು ಏನಾದನೆಂದು ಸಿಪಾಯಿಗಳಲ್ಲಿ ಬಹಳ ಕಳವಳವುಂಟಾಯಿತು" (ವಚನ 18). ಪೇತ್ರನು ಅವರ ಕೈಯಿಂದ ತಪ್ಪಿಸಿಕೊಂಡದ್ದರಿಂದ, ಹೆರೋದನಿಂದ ಆ ಸಿಪಾಯಿಗಳಿಗೆ ಉಂಟಾಗ ಬಹುದಾದ ಶಿಕ್ಷೆಯ ನಿಮಿತ್ತ ಅವರು ಹೆದರಿದರು.

ಪೇತ್ರನಿಗಾಗಿ ಬಹಳವಾಗಿ ಹುಡುಕಾಡಿದರು - ಸೆರೆಮನೆಯ ಒಳಗೂ, ಪಟ್ಟಣದಲೆಲ್ಲ

ಆ ಸುತ್ತಲ ಪ್ರದೇಶದಲ್ಲೂ ಹುಡುಕಿದರು.[21] "ಹೆರೋದನು ಅವನನ್ನು ಹುಡುಕಿಸಿ ಅವನು ಸಿಕ್ಕಲಿಲ್ಲವಾದದರಿಂದ ಕಾವಲುಗಾರರನ್ನು ವಿಚಾರಣೆ ಮಾಡಿದನು ..." (ವಚನ 19ಎ). ಹೆರೋದನು ಪೇತ್ರನ ಕುರಿತು ಚಿಂತಿಸದೇ, ತನ್ನ ಸ್ವಂತ ಗೌರವದ ಕುರಿತು ಯೋಚಿಸಿ ದನು. ಪೇತ್ರನು ತಪ್ಪಿಸಿಕೊಳ್ಳದಂತೆ ಅವನಿಗೆ ಭದ್ರವಾದ ಕಾವಲನ್ನು ಇಟ್ಟಿದ್ದರೂ ಅವನು ತಪ್ಪಿಸಿಕೊಂಡಿದ್ದರಿಂದ ಇವನು ಮೂರ್ಖನಾದನೆಂದು ತಿಳಿದು ತಾಳ್ಮೆಗೆಟ್ಟನು. ಇವನ ತಪ್ಪಿನಿಂದ ಪೇತ್ರನು ತಪ್ಪಿಸಿಕೊಂಡದ್ದು ಎಂಬ ನಂಬಿಕೆ ಅವನಿಗೆ ಉಂಟಾಗದಿದ್ದರೆ, ಅದು ಕಾವಲುಗಾರರ ತಪ್ಪು ಎಂಬುದು ಅಂತಿಮ ನಿರ್ಣಯ.

"ಅವನು ಕಾವಲುಗಾಗರರನ್ನು ವಿಚಾರಿಸಿದನು" ಎಂಬ ಹೇಳಿಕೆಯಲ್ಲಿ ಅವನು ಗೊಂದಲಕ್ಕೆ ಒಳಗಾದ ಸೂಚನೆಯನ್ನು ನೋಡುತ್ತೇವೆ.[22] ಕಾವಲುಗಾರರನ್ನು ಕರುಣೆಯಿಲ್ಲದೆ ಹಿಂಸಿಸಿರಬಹುದು ಹೆರೋದನ ಅನುಯಾಯಿಗಳು ಇವರನ್ನು ಬಲಿಪಶು ಮಾಡಿದ್ದರು. ಕಾವಲುಗಾರರು ಭಯಗೊಂಡಿದ್ದರು, ನಡೆದ ಘಟನೆಯನ್ನು ತಮ್ಮ ದೃಷ್ಟಿಯಲ್ಲಿ ವಿವರಿಸಿದರು. ಅವರು ಗಾಯಗೊಂಡು ನಡುಗುತ್ತ, ಮುರಿದ ಹಲ್ಲುಗಳನ್ನು ಹೊಂದಿದವರಾಗಿ: "ಮುಂಜಾನೆ ಪೇತ್ರನು ಇರಲಿಲ್ಲ ಎಂದು ಹೇಳಿದರು."

ಹೆರೋದನಿಗೆ ಎರಡು ಆಯ್ಕೆಗಳಿತ್ತು: ಸಿಪಾಯಿಗಳು ಪೇತ್ರನಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿರಬಹುದು ಅಥವಾ ಅದ್ಭುತವು ಜರುಗಿರಬಹುದು. ಅದನ್ನು ನಂಬುವುದು ಅಸಾಧ್ಯವಾದ ನಂಬಿಕೆಯಾಗಿತ್ತು ಸಿಪಾಯಿಗಳಿಗೆ ಮರಣ ದಂಡನೆ ಆಗುವುದೆಂದು ತಿಳಿದಿದ್ದಾಗ್ಯೂ ಸಿಪಾಯಿಗಳು ಒಳಸಂಚು ಮಾಡುವದು ಅಸಾಧ್ಯವಾಗಿತ್ತು. ಇನ್ನೊಂದು ವಿಧದಲ್ಲಿ, ಎರಡನೆಯ ಘಟನೆಯು ಯೋಚಿಸಲಸಾಧ್ಯವಾಗಿತ್ತು (ಅದು ಅದ್ಭುತವೇ). ಹೆರೋದನಿಗಿಂತಲೂ ಮಹತ್ವವುಳ್ಳ ದೇವರು ಭೂಮಂಡಲದಲ್ಲಿ ಇರುವನೆಂದು, ನಂಬಿರುವ ಕ್ರೈಸ್ತರನ್ನು ಅವನು ಗಂಭೀರವಾಗಿ ಪರಿಗಣಿಸಬೇಕಾಯಿತು.

ಹೆರೋದನು ಯೋಚಿಸಲಾರದ್ದನ್ನು ನಂಬಲಸಾಧ್ಯ ಮಾಡಿಕೊಳ್ಳಬೇಕಾಯಿತು. ಪೇತ್ರನು ತಪ್ಪಿಸಿಕೊಳ್ಳಲು ಕಾವಲುಗಾರರೇ ಕಾರಣವೆಂಬುದು ಅವನ ನಿರ್ಣಯವಾಯಿತು. ("ಈ ದಿವಸಗಳಲ್ಲಿ *ಯಾರನ್ನು* ನಂಬಲಾಗದು," ಎಂಬುದು ಅವನ ಯೋಚನೆಯ ಊಹೆ!) ರೋಮಾಯರ ನಿಯಮದ ಪ್ರಕಾರ, ಅಪರಾಧಿಯು ತಪ್ಪಿಸಿಕೊಂಡರೆ ಅವನ ಅಪರಾಧದ ಶಿಕ್ಷೆಯನ್ನು ಕಾವಲುಗಾರರಿಗೆ ನೀಡಲಾಗುತ್ತಿತ್ತು, ಆದಾಗ್ಯೂ ಹೆರೋದನು ಅನುಕಂಪವನ್ನು ತೋರಿಸಬಹುದಿತ್ತು. ಆ ಕಾವಲುಗಾರರು ಮಾಡಿದ ಕಾರ್ಯಗಳು ಪ್ರಚಲಿತವಾಗಬೇಕೆಂದು, "ಅವರಿಗೆ ಮರಣದಂಡನೆಯನ್ನು ವಿಧಿಸಿದನು" (ವಚನ 19ಬಿ). ತನ್ನ ಮೂಲ ಪಿತೃಗಳಂತೆ, ತನ್ನ ಸ್ವಾರ್ಥಕ್ಕಾಗಿ ನಿರ್ದೋಷಿಗಳನ್ನು[23] ಸಂಹಾರ ಮಾಡಿದನು.

ಬಳಿಕ ಅವನು "ಯೂದಾಯದಿಂದ ಕೈಸರೈಯಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಇದ್ದನು" ಎಂದು ಲೂಕನು ದಾಖಲಿಸಿರುವನು (ವಚನ 19ಸಿ). ಯೆರೂಸಲೇಮಿನ ಅಧಿಕಾರಿಗಳು ವಿಶೇಷ ಉತ್ಸವಗಳಿಗೆ ಯೆರೂಸಲೇಮಿಗೆ ಬಂದು ಪುನಃ ಕೈಸರೈಯ ಅರಮನೆಗೆ ಹಿಂದಿರುಗುವುದು ವಾಡಿಕೆಯಾಗಿತ್ತು, ಆದರೆ ಲೂಕನ ದಾಖಲೆಯಂತೆ ಹೆರೋದನು ಬೇರೆ ಕಾರಣಕ್ಕಾಗಿ ತನ್ನ ರಾಜದಾನಿಗೆ ಹಿಂದಿರುಗಿದ್ದನು. ಒಬ್ಬನ ನಂತರ ಮತ್ತೊಬ್ಬ ಅಪೊಸ್ತಲನನ್ನು ಕೊಲ್ಲುವ ಕಾರಣದಿಂದ ಅವನು ಯೆರೂಸಲೇಮಿನಲ್ಲೇ ಉಳಿಯಲು ಪ್ರಯತ್ನಿಸಿದ್ದರೂ, ಕಾವಲುಗಾರರನ್ನು ಕೊಂದ ನಿಮಿತ್ತ ತನ್ನ ಪ್ರಖ್ಯಾತಿಗೆ ಕಳಂಕ ಉಂಟಾಗ ಬಹುದೆಂಬ ಕಾರಣದಿಂದ ಯೆರೂಸಲೇಮಿನಿಂದ ದೂರ ಉಳಿಯಲು ಯತ್ನಿಸಿದನು.

ಸಾಮಾನ್ಯ ಜನರ ಪ್ರತಿಕ್ರಿಯೆ ಏನೇ ಆಗಿದ್ದರೂ, ತನ್ನ ನಿರ್ಣಯವು ಸರಿಯಾದದ್ದು ಎಂದು ಹೆರೋದನು ತಿಳಿದಿದ್ದನು. ಪೇತ್ರನು ತಪ್ಪಿಸಿಕೊಂಡ ವಿಷಯದಲ್ಲಿ, ಹೆರೋದನು, "ನಾನು ದೇವರಾಗಿರುವುದು; ನಾನೇ *ಸರ್ವಶಕ್ತನು*[24] ಎಂದು ಹೇಳಿದವನು. ನಾನು ಎಂದೂ ತಪ್ಪು ಮಾಡುವವನಲ್ಲ ಅಂದನು!"

ಅಪೊಸ್ತಲರ ಕೃತ್ಯಗಳು 12ರ ಅಂತಿಮ ಚಿತ್ರಣವು, ಹೆರೋದನ ಜೀವಿತದ ಅಂತಿಮ ಚಿತ್ರಣವಾಗಿದೆ. ಅವನ ಅಹಂಕಾರಮಯವಾದ ಹೃದಯವನ್ನು ಎಲ್ಲರು ನೋಡಿದರು. ಅಪೊಸ್ತಲರ ಕೃತ್ಯಗಳು 12ರಲ್ಲಿ ಎರಡು ಮೂಲ ಸಂದೇಶಗಳಿವೆ. ಮೊದಲನೆಯದು (ಕಡೆಯ ಪಾಠದಲ್ಲಿ ನೋಡಿರುವಂತೆ) ದೇವರ ಚಿತ್ತವನ್ನು ಮಾಡುವವರ ಸಂಗಡ, ದೇವರು ಇರುತ್ತಾನೆ. ಎರಡನೆದಾಗಿ, ವಚನ 20ರಿಂದ 23ರವರೆಗೆ ವಿವರವಾಗಿ ತಿಳಿಸಿರವಂತೆ: ಅವನ ವಿರೋಧಿಗಳನ್ನು ದೇವರು ದ್ವೇಷಿಸುತ್ತಾನೆ: "ತಾವುಗಳು ದೇವರೆಂದು ಭಾವಿಸುವ ಜನರ ಕುರಿತ ಎಚ್ಚರಿಕೆಯ ಫಲಕವನ್ನು ಹಾಕಿಕೊಳ್ಳೋಣ!"

"ತೂರ್ ಸಿದೋನ್ ಪಟ್ಟಣಗಳ ನಿವಾಸಿಗಳು ತಮ್ಮ ಮೇಲೆ [ಹೆರೋದನು] ಬಹಳವಾಗಿ ಕೋಪಿಸಿಕೊಂಡಿರುವುದನ್ನು ನೋಡಿ" ಎಂದು ವಾಕ್ಯ ಆರಂಭಗೊಳ್ಳುತ್ತದೆ (ವಚನ 20ಎ). ತೂರ್ ಮತ್ತು ಸಿದೋನ್ ಫೊಯಿನಿಕೆಯ ಮುಖ್ಯ ಪಟ್ಟಣಗಳಾಗಿದ್ದು, ಪಾಲಿಸ್ತೇನಿನ ಉತ್ತರ ದಿಕ್ಕಿನ ಪ್ರದೇಶವಾಗಿತ್ತು.[25] ಹೆರೋದನು ಅವರೊಂದಿಗೆ ಸಿಟ್ಟುಗೊಂಡ ಕಾರಣ ತಿಳಿದಿರುವುದಿಲ್ಲ; ಪಾಲಿಸ್ತೇನ್ ಮತ್ತು ಫೊಯಿನಿಕೆಯು ವಾಣಿಜ್ಯ ವ್ಯವಹಾರದ ಮಾರ್ಗವಾಗಿದ್ದರಿಂದ, ತೂರ್ ಮತ್ತು ಸಿದೋನಿನವರು ಅವ್ಯವಹಾರವನ್ನು ಹೊಂದಿರಬಹುದೆಂಬ ಶಂಕೆಯಿಂದ ಅವರ ಮೇಲೆ ಕೋಪಿಸಿಕೊಂಡಿದ್ದನು.

ವಚನ 20ರಲ್ಲಿ, "ಯಾಕೆಂದರೆ ಅರಸನ ಸೀಮೆಯಿಂದಲೇ ಅವರ ಸೀಮೆಗೆ ದವಸ ದಾನ್ಯ ಬರುತ್ತಿತ್ತು." ಫೊಯಿನಿಕೆಯಲ್ಲಿ ಆಹಾರವನ್ನು ಬೆಳೆಯುತ್ತಿದ್ದರು ಅಲ್ಲಿದ್ದ ಜನರಿಗೆ ಸಾಕಾಗುವಷ್ಟು ಇರಲಿಲ್ಲ; ಅವರ ಆಹಾರಕ್ಕಾಗಿ ಪಾಲಿಸ್ತೇನನ್ನು ಅವಲಂಭಿಸಿದ್ದರು.[26] ಐಗುಪ್ತರು ಸಹ; ಫೊಯಿನಿಕೆಗೆ ಸರಬರಾಜು ಮಾಡುತ್ತಿದ್ದರು, ಅವರು ಅತಿ ದೂರದಲ್ಲಿದದ್ದರಿಂದ, ಅವರ ಸರಕುಗಳು ದುಬಾರಿಯಾಗಿದ್ದವು. ಆದ್ದರಿಂದ ಅವರು [ಹೆರೋದನ] ಸಂಗಡ ಸಂಧಾನವಾಗಬೇಕಿತ್ತು. ಇದರ ನಿಮಿತ್ತ, "ಅವನ ಸನ್ನಿಧಿಗೆ ಬಂದು ಅರಸನ ಅಂತಃಪುರದ ಮೇಲಣ ಅಧಿಕಾರಿಯಾದ ಬ್ಲಾಸ್ತನನ್ನು ಒಲಿಸಿಕೊಂಡು ಸಮಾಧಾನವಾಗಬೇಕೆಂದು ಅರಸನನ್ನು ಬೇಡಿಕೊಂಡರು" (ವಚನ 20ಬಿ). ಬಹುಶಃ ಲಂಚವನ್ನು ನೀಡಿ ಬ್ಲಾಸ್ತನನ್ನು "ಒಲಿಸಿಕೊಂಡಿರಬಹುದು" ಇದರಿಂದ ಅರಸನ ಅಂತಃಪುರಕ್ಕೆ ಪ್ರವೇಶ ಪಡೆದಿರಬಹುದು. ಈ ಮನುಷ್ಯನು ಅಂತಃಪುರದ ಹಾಗೂ ಅರಸನ ವೈಯಕ್ತಿಕ ಜೀವನದ ಹೊಣೆಯನ್ನು ಹೊಂದಿರಬಹುದು. ಮೆಕ್ ಕಾರ್ಡ್‌ಸ್ ಅನುವಾದದಲ್ಲಿ "ಅರಸನ ಅಡಿಗೆಯವನು"[27] ಎಂಬುದಾಗಿದೆ. NIVಯಲ್ಲಿ "ಅಸನ ನಂಬಿಗಸ್ತನಾದ ಸೇವಕನು ಎಂಬುದಾಗಿದೆ."

ತೀರ್ಮಾನದ ಮೊದಲ ದಿನದಲ್ಲಿ,[28] ಜೋಸೆಫಸನು ಆ ಸಂದರ್ಭದ ವಿವರಣೆಯನ್ನು ನೀಡಿರುವನು, ಕೈಸರೈಯ ಕ್ಲೌದ್ಯನನ್ನು ಸನ್ಮಾನಿಸುವ ವಿಶೇಷ ದಿನವಾಗಿತ್ತು. "ಗೊತ್ತು ಮಾಡಿದ ದಿನದಲ್ಲಿ ಹೆರೋದನು ರಾಜವಸ್ತ್ರವನ್ನು ಧರಿಸಿಕೊಂಡು ರಾಜಾಸಾನದ ಮೇಲೆ ಕೂತು ಅವರಿಗೆ ಉಪನ್ಯಾಸ ಮಾಡಿದನು" (ವಚನ 21). ಹೆರೋದನ "ರಾಜ ವಸ್ತ್ರದ" ಕುರಿತು, ಜೋಸೇಫಸನು ವಿವರಿಸಿ:

> ಎರಡನೆಯ, ದಿನದಲ್ಲಿ ಅವನು [ಅಗ್ರಿಪ್ಪ] ಬೆಳ್ಳಿಯಿಂದ ಸಿದ್ಧಪಡಿಸಿದ ವಸ್ತ್ರವನ್ನು ಧರಿಸಿಕೊಂಡು, ಸುಂದರವಾಗಿ ಕಾಣುವವನಾಗಿ, ನಸುಕಿನಲ್ಲಿಯೇ ಬಂದನು; ಮುಂಜಾನೆಯ ಸೂರ್ಯನ ಬೆಳಕಿನ ಪ್ರತಿಬಿಂಬವನ್ನು ಅವನ ಬಟ್ಟೆಯು ನೀಡುತ್ತಿತ್ತು ಮತ್ತು ಅವನನ್ನು ನೋಡುತ್ತಿರವವರಿಗೆ, ಗಾಬರಿಯನ್ನು ಉಂಟುಮಾಡಿತು: ...[29]

ಅಲ್ಲಿ ಕೂಡಿದ್ದ ಜನರು, "ಇದು ಮನುಷ್ಯನ ನುಡಿಯಲ್ಲ, ದೇವರ ನುಡಿಯೇ ಎಂದು ಅರ್ಭಟಿಸಿದರು!" (ವಚನ 22). ಅವನ ಅಹಂಕಾರವು, "ಒಂದು ಸ್ಥಳದಿಂದ ಒಂದು, ಮತ್ತೊಂದು ಸ್ಥಳದಿಂದ ಮತ್ತೊಂದು ದೇವರು ಎಂದುಕೊಂಡು[30] ಕೂಗುತ್ತಿತ್ತು ಎಂದು ಜೋಸೆಫಸನು ತಿಳಿಸಿರುವನು." ತೂರ್ (ಮತ್ತು ಸೀದೋನ್‌ರವರು ಅರಸನನ್ನು

ಒಲಿಸಿಕೊಳ್ಳ ಬೇಕಿದದ್ದರಿಂದ,) ಅರಸನ ಕುರಿತು ಹರ್ಷಪಡುತ್ತಿರಬಹುದು.

ಅವನನ್ನು ಅವರು "ದೇವರು" ಎಂದು ಕರೆದಾಗ, ಅವನಿಗೆ ಮರಣವಾಗುವಷ್ಟು ಭಯವಾಗಿರಬಹುದು. ಕೊರ್ನೇಲಿಯನು ಪೇತ್ರನ ಕಾಲಿಗೆ ಬೀಳುವಾಗ, ಪೇತ್ರನು ಅವನಿಗೆ, ಏಳಪ್ಪಾ, "ನಾನು ಸಹ ಮನುಷ್ಯನು" ಅಂದನು (10:26). ಮತ್ತು ಲುಸ್ತ್ರದ ಜನರು ಪೌಲ ಮತ್ತು ಬಾರ್ನಬರ ಕುರಿತು, "ದೇವತೆಗಳು ನಮ್ಮ ಮಧ್ಯದಲ್ಲಿ ಬಂದಿರುವರು" ಎಂದು ಹೇಳಿದಾಗ - ದೇವ ಸೇವಕರುಗಳು ತಮ್ಮ ವಸ್ತ್ರಗಳನ್ನು ಹರಿದು ಕೊಂಡರು (14:11, 14). ಹೆರೋದ ಅಗ್ರಿಪ್ಪನು, ಜನರಿಂದ ಈ ಹೊಗಳಿಕೆಯನ್ನು ಹೊಂದಲು ಇಚ್ಛಿಸಿದನು.[31] ಜೊಸೆಫಸನು, ತಿಳಿಸಿ,[32] "ಹೆರೋದನು ಆ ಜನರನ್ನಾಗಲಿ, ಅವರ ಹೊಗಳಿಕೆಯನ್ನಾಗಲೀ ತಿರಸ್ಕರಿಸಲಿಲ್ಲ"[33] ಅವನು ತನ್ನ,ಈ ಕ್ರಿಯೆಯ ನಿಮಿತ್ತ, "ನಾನು ದೇವರು; ದೈವೀಕ ಮನುಷ್ಯನು ಎಂದು ಕೊಚ್ಚಿಕೊಂಡನು; ಜನರು ನೀಡುವ ಸನ್ಮಾನಕ್ಕೆ ನಾನು ಯೋಗ್ಯನು ಅಂದು ಕೊಂಡನು!"

ಯೆಶಾಯನ ಮೂಲಕ ಯೆಹೋವನು ಹೇಳಿದ್ದೇನೆಂದರೆ, "ನಾನೇ ಯೆಹೋವನು; ಇದೇ ನನ್ನ ನಾಮವು" (ಯೆಶಾಯ 42:8). ಪ್ರವಾದಿಯು ದೇವರನ್ನು ಕುರಿತು "ಪ್ರಭುಗಳನ್ನು ನಿರ್ನಾಮ ಮಾಡುತ್ತಾನೆ" (ಯೆಶಾಯ 40:23). ಆದ್ದರಿಂದ ವಚನ 23ರನ್ನು ಗಮನಿಸುವಾಗ ಆಶ್ಚರ್ಯವಾಗುವದಿಲ್ಲ: "ಆ ಘನವನ್ನು ಅವನು ದೇವರಿಗೆ ಸಲ್ಲಿಸದೆ ಹೋದದರಿಂದ ಕರ್ತನ ದೂತನು ಆ ಕ್ಷಣದಲ್ಲೇ ಅವನನ್ನು ಬಡಿದನು;[34] ಅವನು ಹುಳಬಿದ್ದು ಸತ್ತನು"[35] (12:23). ಹೆರೋದನ ಬಳಿ ಇದ್ದವರಲ್ಲಿ ಉಂಟಾದ ಭಾವನೆಯ ಕುರಿತು, ಜೋಸೆಫಸನು ಈ ರೀತಿ ವಿವರಿಸಿರುವನು:

> ಹೆರೋದನ ಹೊಟ್ಟೆಯಲ್ಲಿ ಸಂಕಟವಾದ್ದರಿಂದ, ಅವನು ಕಿರುಚಾಡಲು ಆರಂಭಿಸಿದನು ... ನಂತರ ಅವನನ್ನು ಅರಮನೆಗೆ ಸಾಗಿಸಲಾಯಿತು, ಅವನು ಐದು ದಿವಸಗಳ ಕಾಲ ಸಂಕಟವನ್ನು ಅನುಭವಿಸಿ, ಐವತ್ತನಾಲ್ಕು ವರ್ಷದವನಾಗಿ, ಏಳು ವರ್ಷ ಆಡಳಿತ ನಡಿಸಿ ಪ್ರಾಣಬಿಟ್ಟನು; ...[36]

ಹೆರೋದನ ಅನಾರೋಗ್ಯದ ಕುರಿತು ಅನೇಕ ಅಭಿಪ್ರಾಯಗಳಿವೆ, ಹೊಟ್ಟೆಯ ಹುಣ್ಣನ್ನು ಹೊಂದಿದವನಾಗಿ, ಕರುಳುಬೇನೆಯು ಉಂಟಾಯಿತು. "ಹುಳ ತಿಂದಿತು" ಎಂಬ ವ್ಯಾಖ್ಯಾನವು ಅಕ್ಷರಶಃ ನಿಜವಾಗಿರಬಹುದು; ಕರುಳುಗಳಲ್ಲಿ ಹುಳುಗಳು ಉದ್ಭವಿಸುವ ರೋಗವು ಆ ಕಾಲದಲ್ಲಿ ಸಾಮಾನ್ಯವಾಗಿತ್ತು,[37] ಒಂದು ವೇಳೆ ಹೆರೋದನು ಬದುಕುವ ಇನ್ನೊಂದು ಅವಕಾಶವನ್ನು ಹೊಂದಿದ್ದರೆ, ಹುಳುಗಳ ನಿಮಿತ್ತ ಗೊಂದಲಮಯವಾಗಿರುತ್ತಿತ್ತು. ಇನ್ನೊಂದು ವಿಧದಲ್ಲಿ, ಹುಳಗಳ ನಿರಂತರ ಭಾಧೆಯು ವಾಕ್ಯಕ್ಕನುಗುಣವಾಗಿರುವ ಶಿಕ್ಷೆಯಾಗಿರುತ್ತದೆ (ನರಕದಲ್ಲಿ; ಮಾರ್ಕ 9:48), ಅವನ ಮರಣವು ದೇವರಿಂದಲೇ ಬಂದದ್ದು ಎಂದು ಸಾಭೀತಾಗಿರುತ್ತದೆ.

ಹೆರೋದನ ಭಯಂಕರವಾದ ಮರಣದ ನಂತರ, ಲೂಕನು ಬರೆದು: "ಆದರೆ ದೇವರ ವಾಕ್ಯವು ಹಬ್ಬಿ ಹೆಚ್ಚುತ್ತಾ ಬಂತು" (ವಚನ 24).[38] ಆ ಶತಮಾನದಲ್ಲಿ ದಿನ ಪತ್ರಿಕೆಗಳು ಇದಿದ್ದರೆ, ಹೆರೋದನ ಮರಣದ ವರ್ತಮಾನವು ಮುಖಪುಟದೆಲ್ಲೇ ಮುದ್ರಿತವಾಗುತ್ತಿತ್ತು, "ಆದರೆ" ವಾಕ್ಯ ಹಬ್ಬಿ, ಹೆಚ್ಚುತ್ತಾ ಬಂತು ಎಂಬ ವರ್ತಮಾನವು ಒಳಪುಟವನ್ನು ಸೇರಬಹುದಿತ್ತು. ದೇವರ ದೃಷ್ಟಿಯಲ್ಲಿ ಆತನ ವಾಕ್ಯಗಳು ಮೇಲುಗೈ ಸಾಧಿಸಿತು: ಅರಸನು ಬಿದ್ದು ಹೋದನು, ವಾಕ್ಯವು ವೃದ್ಧಿಯಾಯಿತು ಎಂಬ ವ್ಯತ್ಯಾಸವನ್ನು ಗಮನಿಸುತ್ತೇವೆ. ಹೆರೋದನು ಸಭೆಯನ್ನು ನಾಶಮಾಡುವೆನು ಅಂದನು, *ಆದರೆ* ಅವನೇ ನಾಶವಾದನು.

ಕ್ರಿ.ಶ. 44ರಲ್ಲಿ[39] ಅರಸನ ಮರಣವುಂಟಾಯಿತು ಎಂದು ಜೋಸೆಫಸನು ತಿಳಿಸುರುವನು. ವಾಕ್ಯವು ಪ್ರಚಾರವಾಗುವಾಗ, ಇನ್ನೊಂದು ನಿಜಾಂಶವನ್ನು ತಿಳಿಯುತ್ತೇವೆ; ಹೆರೋದ ಅರಸನ ಮರಣದಲ್ಲಿ ಅವನ ಆಡಳಿತದ ಅಂತ್ಯದ ಪ್ರಾರಂಭವಾಯಿತು. (I ಹೆರೋದ ಅಗ್ರಿಪ್ಪನ) ಅಧ್ಯಾಯ 26ರಲ್ಲಿ, ಮರಣವು[40] ಯೆಹೂದ್ಯರ ಅಂತ್ಯದ ಆರಂಭವನ್ನು ತೋರಿಸುತ್ತದೆ.

ಹೆರೋದನ ಮರಣದ ಕುರಿತು *ಎನ್ ಸೈಕ್ಲೋಪೀಡಿಯಾ ಬ್ರಿಟಾನಿಕ್‌ದಲ್ಲಿ* ನೋಡುತ್ತೇವೆ: "ಅವನ ಮರಣವು ... ಯೆಹೂದ್ಯ ನಗರದಲ್ಲಿ ಅಘಾತವನ್ನು ಉಂಟು ಮಾಡಿತು, ಅವನು ತನ್ನ ಸಕಲ ತಪ್ಪುಗಳನ್ನು ಹೊಂದಿದ್ದರೂ ... ಯೆಹೂದ್ಯರ ಮತ್ತು ರೋಮಾಯರ ನಡುವಿನ ಸಂಬಂಧವನ್ನು ದೃಢವಾಗಿ ಇಟ್ಟಿದ್ದನು, ಇಬ್ಬರ ಒಳಿತಿಗಾಗಿ, ಎರಡು ಗುಂಪಿನವರು ಅಸ್ತಿತ್ವದಲ್ಲಿದ್ದರು."[41] ಬರ್ಟನ್ ಕಾಫ್‌ಮನ್‌ರವರ ಹೇಳಿಕೆಯಂತೆ, ರೋಮಾಯರು, ಯೆಹೂದ್ಯರ ಕುರಿತು ಹೊಂದಿದ್ದ ಸಹನೆಯನ್ನು ಒಬ್ಬ ಮನುಷ್ಯನ ಮರಣವು ತೆಗೆದು ಹಾಕಿತು, ಇದರ ಸಂಗಡ 20 ವರ್ಷಗಳ ನಂತರ ಟೈಟಸ್ ಮತ್ತು ವೆಸ್‌ಪಾನಿಯನ್ನರು ಯೆರೂಸಲೇಮನ್ನು ನಾಶಮಾಡಿದಾಗ, ದೇವದೂತರ ಮೂಲಕ ದೇವರು ಹೆರೋದನನ್ನು ನಾಶ ಮಾಡಿದ ಸಂಗತಿಯನ್ನು ನೆನಪು ಮಾಡಲಾಯಿತು.[42]

ದೇವರು ಹೆರೋದನನ್ನು ನಾಶಪಡಿಸಿದ ವಿಷಯದ ಮೂಲಕ, ದೇವರು ವಿರೋಧಿಗಳನ್ನು ಹೊಂದಿರುವದಿಲ್ಲವೆಂದು ಸಾಬೀತು ಮಾಡಿರುವನು! ಈ ಲೋಕವು ದೇವರ ಸಿಂಹಾಸನದ ಆಡಳಿತಕ್ಕೆ ಒಳಪಡುತ್ತದೆ. ವಿನಃ ವೈರಿಗಳ ಆಡಳಿತಕ್ಕಲ್ಲ. ಯೇಸು ಹೇಳಿದ ಹಾಗೆ, "ನಿನ್ನ ದೇವರಾಗಿರುವ *ಕರ್ತನಿಗೆ* ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು" (ಮತ್ತಾಯ 4:10; ಒತ್ತಿ ಹೇಳಿದ್ದು ನನ್ನದು).

## ಹೆರೋದ್ಯರ ಅನುಯಾಯಿಗಳು

"ದೇವರೆಂದು" ಹೇಳಿಕೊಂಡವರಲ್ಲಿ ಹೆರೋದನು ಒಬ್ಬನೇ ಆಗಿರದೆ, ಆ ರೀತಿ ಹೇಳಿದವರಲ್ಲಿ, ಅವನ ಅನೇಕ ಅನುಯಾಯಿಗಳು ಅನೇಕ ವರ್ಷಗಳಿಂದ ಇದ್ದರು ಎಂಬ ಅಂಶವನ್ನು ನಾವು ತಿಳಿಯಲೇಬೇಕು.

ಈ ವಿಧವಾದ ವ್ಯಾಖ್ಯಾನವನ್ನು ನಾವು ನೀಡುವಾಗ, ನಾವು ಇತರರ ಬಗ್ಗೆ ಮಾತನಾಡಲು ಸಮಯವನ್ನು ವ್ಯಯಮಾಡುತ್ತೇವೆ. ಉದಾಹರಣೆಗೆ, ತಾವುಗಳು ದೇವರೆಂದು ಹೇಳಿಕೊಂಡು, ಪುರಸ್ಕಾರವನ್ನು ಹೊಂದಿದವರಲ್ಲಿ ಫರೋಹನು, ಕೈಸರನು ಮತ್ತು ಇತರರು ಇರುವರು. ನಮ್ಮ ಹಿಂದಿನ ಪಾಠದಲ್ಲಿ ಐಥಿಯೋಪ್ಯದ ರಾಣಿಯಾದ ಕಂದಾಕೆಯ ಕುರಿತು ಓದಿರುವೆವು (8:27); ಐಥಿಯೋಪ್ಯದವರು ಆಕೆಯ ಗಂಡನನ್ನು ದೇವರೆಂದು ಪರಿಗಣಿಸಿದ್ದರು. ಕೆಲವು ಅನುಯಾಯಿಗಳು ತಮ್ಮ ನಾಯಕರನ್ನು ದೇವರ ಪದವಿಗೆ ಸೇರಿಸಿರುವರು. ಕೆಲವು ಸಾರಿ ನಾವುಗಳು "ವಿಗ್ರಹ" ಎಂದು ಹೇಳುವಾಗ, ಸಿನಿಮಾ ಲೋಕದ ನಟನಟಿಯರನ್ನು "ಯೌವನಸ್ಥರ ವಿಗ್ರಹಗಳು" ಎನ್ನುತ್ತೇವೆ. (ಆ ನಾಯಕರುಗಳು ಏನೆಂದು ತಿಳಿಯುವರೆಂದು ನಾನು ಅರಿಯೆನು ಆದರೆ ನನಗೆ ಅದು ತಲ್ಲಣ ಉಂಟು ಮಾಡುತ್ತದೆ.) ಅದೇ ವಿಧವಾದ ಆಲೋಚನೆಯನ್ನು ನುಡಿಯನ್ನು ವರ್ತನೆಗಳನ್ನು ಹೊಂದಿರುವವರನ್ನು ಗಮನಿಸುತ್ತೇವೆ. ರೋಮಾಪುರ 1:25ರಲ್ಲಿ, "ಸೃಷ್ಟಿ ಕರ್ತನನ್ನು ಆರಾಧಿಸದೆ, ಸೃಷ್ಟಿಯನ್ನೇ ಪೂಜಿಸುವವರ ಕುರಿತು ತಿಳಿಸಲಾಗಿದೆ"; ತಮ್ಮನ್ನೇ ದೇವರನ್ನಾಗಿ ಮಾಡಿಕೊಳ್ಳುವವರು ನಿಜವಾಗಿಯೂ ಹೆರೋದನು ಈ ಪಾಪಕ್ಕೆ ಒಳಗಾದನು ಈ ವಿಷಯವನ್ನು ವಿಸ್ತಾರ ಮಾಡುವದು ಅನಗತ್ಯ.

ನಮ್ಮ ಪಾಠವನ್ನು ಮುಂದುವರಿಸಲು ವಚನ 22 ಮತ್ತು 23ರಲ್ಲಿ ಜನರು ಅರ್ಭಟಿಸಿದ ನಂತರ - ಇದು ಮನುಷ್ಯನ ನುಡಿಯಲ್ಲ, ದೇವರ ನುಡಿಯೇ ಎಂದು ಅರ್ಭಟಿಸಿದರು! ಅವನು ದೇವರಿಗೆ ಘನವನ್ನು ಸಲ್ಲಿಸದೆ ಹೋದದರಿಂದ ಕರ್ತ*ನ ದೂತನು ಆ ಕ್ಷಣದಲ್ಲೆ ಅವನನ್ನು* [ಹೆರೋದ] ಬಡಿದನು. (ಒತ್ತಿ ಹೇಳಿರಿ.) ಇದು ಹೆರೋದನ ನಿರ್ಧಿಷ್ಟವಾದ ಪಾಪವಾಗಿತ್ತು, ಹಾಗೂ ನೆಬುಕದ್ನೆಚರನ ಪಾಪದಂತೆಯೂ ಇತ್ತು. ದೇವರಿಗೆ ಘನ ಸಲ್ಲಿಸುವ ಬದಲು ತಾನೇ ಆ ಘನವನ್ನು ಹೊಂದಿದನು. "ಆ ಘನವನ್ನು ದೇವರಿಗೆ ಸಲ್ಲಿಸದೇ ಹೋದದ್ದರಿಂದ" ಎಂಬ ಹೇಳಿಕೆಯು ಗಂಭೀರ ಚಿಂತನೆಯನ್ನುಂಟು ಮಾಡುತ್ತದೆ!

ನಮ್ಮಿಂದ ದೇವರಿಗೆ ಯಾವಾಗಲೂ ಘನ ಉಂಟಾಗುತ್ತದೆಯೇ? ದೇವರು ನಮಗೆ

ಸಮಯವನ್ನು, ತಲಾಂತುಗಳನ್ನು ವರ್ಚಸ್ಸನ್ನು ಮತ್ತು ಅವಕಾಶಗಳನ್ನು ನೀಡಿರುವನು - ಇತರೇ ರೀತಿಯಲ್ಲೊ ಆಶೀರ್ವದಿಸಿರುವನು. ನಮ್ಮ ಸಾಧನೆಗಳು ಅಲ್ಪವಾಗಿದ್ದಾಗ್ಯೂ ಜನರು ಅದನ್ನು ಕುರಿತು ಶ್ಲಾಘಿಸುವಾಗ, ಅದರ ಘನವನ್ನು ದೇವರಿಗೆ ಸಲ್ಲಿಸುತ್ತಿದ್ದೆವೋ? ಕೆಲವು ಜನರ ಸಂದರ್ಶನದಲ್ಲಿ ಅವರ ಗುರಿ ಸಾಧನೆಗಳ ಕುರಿತಾಗಿ ಎಷ್ಟೊ ಹೆಚ್ಚಾಗಿ ಕೇಳುತ್ತೇವೆ? ಇತರರು ಸಹ ತಮ್ಮ ತ್ಯಾಗದ ಮೂಲಕವಾಗಿ ಅನೇಕ ಕಾರ್ಯಗಳನ್ನು ಸಾಧಿಸಿರುವದು. ಸತ್ಯ ವಾಗಿದ್ದರೂ, ಅದೇ ವಿಧವಾದ ಯಶಸ್ಸನ್ನು ಹೊಂದಿರಲಾರರು ಸಾಧನೆ ಗೈದವರಿಗೆ ದೇವರು ಹೆಚ್ಚಾದದ್ದನ್ನು ನೀಡಿರುವರು ಅವರು ಅದನ್ನು ಗ್ರಹಿಸಿ ದೇವರನ್ನು ಘನಪಡಿಸಬೇಕು!

ಅನೇಕ ವರ್ಷಗಳ ಹಿಂದೆ ದಾವೀದನು, "ಕರ್ತನೆ, ನನ್ನ ದೇವರೆ, ಮನಃ ಪೂರ್ವಕ ವಾಗಿ ನಿನ್ನನ್ನು ಕೊಂಡಾಡುವೆನು: ಎಂದೆಂದಿಗೂ ನಿನ್ನ ನಾಮವನ್ನು ಘನಪಡಿಸುವೆನು" (ಕೀರ್ತನೆ 86:12). ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ದೇವ ಜನರು ಇದೇ ಆತ್ಮವನ್ನು ಹೊಂದಿದ್ದರು. ಕುಂಟನಾದ ಬಿಕ್ಷುಕನು ಗುಣ ಹೊಂದಿದಾಗ, "ಜನರೆಲ್ಲರೂ ದೇವರನ್ನು ನಡೆದಿದ್ದ ಕಾರ್ಯಕ್ಕಾಗಿ ಕೊಂಡಾಡುತ್ತಿದ್ದರು" (4:21). ಕೈಸರೈಯಲ್ಲಿ ಆದಂತಹ ಘಟನೆಯನ್ನು ಯೆರೂಸಲೇಮಿನ ಕ್ರೈಸ್ತರಿಗೆ ವಿವರಿಸಿದ ನಂತರ, "ದೇವರು ಅನ್ಯ ಜನರಿಗೂ ಜೀವ ಕೊಡಬೇ ಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆಂದು ದೇವರನ್ನು ಕೊಂಡಾಡಿದರು" (11:18). ಪೌಲನ ಸೇವಾ ಪ್ರಯಾಣದ ಕುರಿತು ಅಧ್ಯಯನವನ್ನು ಆರಂಭಿಸುವಾಗ, ಅವನು ಪ್ರಯಾಣದಿಂದ ಹಿಂದಿರುಗಿದ ನಂತರ ಅಂತಿಯೋಕ್ಯದ ಸಭೆಯವರಿಗೆ "ವಿವರಗಳನ್ನು *ಕರ್ತನೇ* ಹೇಳಿದನೇ ಹೊರತು ತನ್ನ ಸಾಧನೆಗಳನ್ನು ಹೇಳಲಿಲ್ಲ" (14:27; ಒತ್ತಿ ಹೇಳಿದ್ದು ನನ್ನದು).

ಒಂದು ಸಾರಿ ಅನೇಕ ವರ್ಷಗಳ ಕಾಲ ಪ್ರಸಂಗಿಯಾಗಿದ್ದ ಒಬ್ಬ ಹಿರಿಯನನ್ನು ಸನ್ಮಾನಿಸಲಾಯಿತು. ಅವನ ಕುರಿತು ಶ್ಲಾಘನೆಗಳನ್ನು ಆಲಿಸದ ನಂತರ, ಅವನು ಎದ್ದು ನಿಂತು ಮುಗುಳು ನಗುತ್ತಾ, "ಒಂದು ವೇಳೆ ನೀವು ಒಂದು ಆಮೆಯನ್ನು ಗೋಡೆಯ ಮೇಲ್ಭಾಗ ದಲ್ಲಿ ನೋಡುವದಾದರೆ, ಅದು ತಾನಾಗಿಯೇ ಅಲ್ಲಿಗೆ ಎರಿ ಹೋಯಿತು. ಎಂಬುದಾಗಿ ನೀವು ತಿಳಿಯುವದಿಲ್ಲ!" ನಂತರ ಅವನು ತನಗೆ ಸಹಾಯ ಮಾಡಿದವರಿಗೆ ಕೃತಜ್ಞತೆ ಹೇಳಿ ಅವನ ಸಾಧನೆಗೆ ಕಾರಣ ಕರ್ತನಾದ ದೇವರಿಗೆ ಘನವನ್ನು ಸಲ್ಲಿಸಿದನು. ನಾವೆಲ್ಲರೂ ಗೋಡೆಯ ಮೇಲಿರುವ ಆಮೆಯಂತಿದ್ದೇವೆ; ನಾವಾಗಿ ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ! ಘನವನ್ನು ಹೊಂದಲು ಯೋಗ್ಯನಾದ ದೇವರಿಗೆ ಮಹಿಮೆ ಸಲ್ಲಿಸೋಣ.

## ಮುಕ್ತಾಯ

ಸ್ವಾರ್ಥಪೂರಿತವಾದ ಜೀವಿತಕ್ಕೆ ಹೆರೋದನ ಜೀವನ ಮತ್ತು ಅವನ ಮರಣವು ಮಾದರಿಯ ಹಾಗೂ ಅಪಾಯದ ಪಾಠವಾಗಿರುತ್ತದೆ. ಈ ದಿವಸಗಳಲ್ಲಿ "ಮರಣದ ಘನತೆಯ" ಕುರಿತು ಮಾತನಾಡುತ್ತೇವೆ. ಒಬ್ಬ ಮನುಷ್ಯನು ಯಾವುದೇ ವಿಧವಾದ ವೈದ್ಯಕೀಯ ತಾತ್ಕಾಲಿಕ ವಾದ ಈ ದಿವಸಗಳಲ್ಲಿ "ಮರಣದ ಘನತೆಯ" ಕುರಿತು ಮಾತನಾಡುತ್ತೇವೆ. ಒಬ್ಬ ಮನುಷ್ಯನು ಯಾವುದೇ ವಿಧವಾದ ವೈದ್ಯಕೀಯ ತಾತ್ಕಾಲಿಕ ವಾದ ಆಧಾರಗಳನ್ನು ಅವಲಂಭಿಸದೇ, ಸ್ವಾಭಾವಿಕವಾಗಿ ಹೊಂದುವ ಮರಣದ ಕುರಿತು ಈ ಹೇಳಿಕೆಯನ್ನು ಹೇಳುತ್ತೇವೆ.[43] ಹೇರೋದನ ಸುತ್ತಲೂ ನುರಿತ ವೈದ್ಯರುಗಳು ಇದ್ದರು ಮತ್ತು ಹಣಬಲವನ್ನು ಆದೇಶದ ಬಲವನ್ನು ಅವನು ಹೊಂದಿದ್ದನು, ಆದಾಗ್ಯೂ ಕೆಲವು ಜನರು ಈ ವಿಧವಾದ ಘನತೆಯ ಮರಣವನ್ನು ಹೊಂದುವದಿಲ್ಲ. ಘನತೆಯಿಂದ ಸಾಯುವದು ಅಥವಾ ಘನತೆಯಿಲ್ಲದೇ ಸಾಯುವದು ವೈದ್ಯಕೀಯ ಸವಲತ್ತುಗಳನ್ನು ಅವಲಂಭಿಸದೇ, ಅವನ ಜೀವಿತಕಾಲದ ವರ್ಚಸ್ಸನ್ನು ಅವಲಂಭಿಸಿರುತ್ತದೆ. ಘನತೆಯಿಂದ ಜೀವಿಸಿದ್ದರೇ, ಘನತೆಯಿಂದ ಸಾಯುವೆವು. ಕ್ಯಾನ್ಸರ ರೋಗದಿಂದ ನರಳಿದ ದೇವ ಸೇವಕರುಗಳನ್ನು

ನಾನು ನೋಡಿದ್ದೇನೆ. ಅವರ ದೇಹಗಳು ಕ್ಷೀಣಿಸಿದ್ದರೂ ಅವರ ತುಟಿಗಳಲ್ಲಿ ನಂಬಿಕೆಯನ್ನು ಮತ್ತು ಅವರ ಕಣ್ಣುಗಳಲ್ಲಿ ನೀರೀಕ್ಷೆಯನ್ನು ಹೊಂದಿದವರಾಗಿ ಪ್ರಾಣ ಬಿಟ್ಟರು. ಇದು ಸತ್ಯವಾದ "ಘನತೆಯ ಮರಣವಾಗಿದೆ."

ನಾನು ಸಾಯಲು ಸಿದ್ಧನಾಗಿದ್ದನೋ? ನೀವು ಸಿದ್ಧರಾಗಿದ್ದಿರೋ? ನಾವುಗಳು ಬದುಕುವದಕ್ಕೆ ಸಿದ್ಧವಾಗಿದ್ದರೇ ಮಾತ್ರ ಸಾಧ್ಯ - ನಾವು ನಮ್ಮ ಜೀವಿತವನ್ನು ದೇವರಿಗೆ ಸಮರ್ಪಿಸಿದ ಹೊರತು - ನಾವು ಸಾಯಲು ಸಿದ್ಧರಾಗಿರುವದಿಲ್ಲ.

---

## ದೃಶ್ಯಾವಳಿಗಳ ಟಿಪ್ಪಣಿಗಳು

"ಹೆರೋದನ ಮನೆತನದ" ಕುರಿತಾಗಿ ಚಿತ್ರಪಟವನ್ನು ತಯಾರಿಸಿ ಅವನ ಚರಿತ್ರೆಯನ್ನು ವಿವರಿಸಿ.

---

ಟಿಪ್ಪಣಿಗಳು

[1]ಇಕೋನಥ್ರೋಪಿ ಮತ್ತು ಬೋನೋಥ್ರೋಪಿ ಎಂಬುದು ಈ ಎರಡು ರೋಗಗಳ ಗುಣಲಕ್ಷಣ ಪದಗಳು ಏನೇ ಇರಲಿ, ಅರಸನಿಗೆ ಅದು ದೈವಶಿಕ್ಷೆಯಾಗಿತ್ತು (ದಾನಿಯೇಲ 4:25). [2]ಅವರುಗಳು ದೇವರ ಅಥವಾ ಮನುಷ್ಯರ ನಿಯಮಗಳಿಗಿಂತಲೂ ಹೆಚ್ಚಾಗಿ ತಿಳಿದಿದ್ದೇವೆಂದುಕೊಂಡಿದ್ದರು. ಅವರು ತಮ್ಮನ್ನು ಮತ್ತು ತಮ್ಮ ಅಭಿಲಾಷೆಗಳನ್ನೆ ಆರಾಧಿಸಿಕೊಂಡರು. [3]ಹೆರೋದನ ಮನೆತನದ ಚಿತ್ರಪಟವನ್ನು ನೋಡಿ. [4]ಹೊಸ ಒಡಂಬಡಿಕೆಯಲ್ಲಿರುವ ಎದೋಮನ್ನು "ಇದು ಮಾಯ" ಎಂಬ ಗ್ರೀಕ್ ಹೆಸರಿನಿಂದ ಕರೆಯಲಾಗಿದೆ (ಮಾರ್ಕ 3:8) ಅಲ್ಲಿನ ಜನರನ್ನು "ಇದು ಮಾಯೆರೆಂದರು." [5]ಈ ಯಾಜಕ ಕುಟುಂಬವನ್ನು ಅಸಮೋನಿಯರು ಅಥವಾ ಮೋನಿಯರೆಂದು ಕರೆದಿದ್ದರು. [6]*ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದ ಕೈಸರೆಯ ಟಿಪ್ಪಣಿಯನ್ನು ನೋಡಿ. [7]ಕ್ರಿ.ಪೂ. 19ರಲ್ಲಿ ಪುನಸ್ಥಾಪನೆಗೊಂಡು, 68 ವರ್ಷಗಳ ನಂತರ ಹಾಗೂ ಹೆರೋದನ ಮರಣದ ನಂತರ ಸಂಪೂರ್ಣಗೊಂಡಿತು. [8]ಅವನು ಅನೇಕ ರಾಜಕೀಯ ವೈರಿಗಳನ್ನು ಹೊಂದಿದ್ದನು, ಆದ್ದರಿಂದ ಅವನ ಕೆಲವು ಭಯಗಳು ನಿವಾರಣೆಗೊಂಡಿದ್ದವು. [9]ಉಪರಾಜನೆಂದರೆ ಒಂದು ಜಾತಿಗೆ ಸಂಬಂಧಪಟ್ಟ ಅರಸನು; ಹೆರೋದ ಅಂತಿಪನನ್ನು "ಹೆರೋದ ಅರಸನೆಂದು" ಕರೆಯುತ್ತಿದ್ದನು (ಮಾರ್ಕ 6:14). [10]ಅರತೀಶನ ಮಗಳು ಪರಿತ್ಯಾಗ ಹೊಂದಿದ ಹೆಂಡತಿಯಾಗಿದ್ದಳು, ಅವಳು ಅರೇಬಿಯದ ಅರಸನು. ಸೌಲನು ದಮಸ್ಕದಿಂದ ತಪ್ಪಿಸಿಕೊಡಂತಹ ಪಾಠವನ್ನು ನೋಡಿರಿ (ಅಪೊಸ್ತಲರ ಕೃತ್ಯಗಳು 9:23-25).

[11]ಹೆರೋದಿಯಳು ಅಂಸ್ತೊಬೂಲನ ಮಗಳು ಹಾಗೂ ಹೆರೋದ ಅಗ್ರಿಪ್ಪನ ಸಹೋದರಿ ಯಾಗಿದ್ದಳು. [12]ಈ ಪ್ರದೇಶಗಳು ಗಲಿಲಾಯ ಸಮುದ್ರದ ಉತ್ತರ ಹಾಗೂ ಪೂರ್ವದಿಕ್ಕಿನಲ್ಲಿದ್ದವು. [13]ಹೆರೋದ್ಯರ ಸಾಮಾನ್ಯ ಗುಂಪಿಗೆ ಸೇರಿದವನು ತಂದೆಯ ಬದಲಾಗಿ ತಾಯಿಯ ನಂತರ ಹೊಂದಿಕೊಂಡನು. [14]ಹೆರೋದ ಅಗ್ರಿಪ್ಪ I ತಂದೆಯಾದ ಅರಿಸ್ತೊಬೂಲಸನ ಹೆಸರನ್ನು ವಾಕ್ಯದಲ್ಲಿ ತಿಳಿಸಿರುವದಿಲ್ಲ. ರೋಮಾಪುರ 16:10ರಲ್ಲಿ ಇನ್ನೊಬ್ಬ ಅರಿಸ್ತೊಬೂಲನಿರುವನು. ಇವನು ಹೆರೋದ ಮಹಾರಾಜನ ಮೊಮ್ಮಗನೆಂಬುದು ಕೆಲವರ ಅಭಿಪ್ರಾಯ. ಅವನು ಕ್ರೈಸ್ತನೆಂದು ಹೇಳಿರುವದಿಲ್ಲ, ಆದರೆ ಅವನ ಮನೆಯವರಲ್ಲಿ ಕೆಲವರು ಕ್ರೈಸ್ತರಾಗಿದ್ದರು. ಪ್ರಾಯಶಃ ಹೆರೋದಿ ಯನೆಂಬುವನು ಗುಲಾಮನಿರಬಹುದು (ರೋಮಾಪುರ 16:11). "ಧ್ಯನು" ಹೆರೋದನ ಅಂತ್ಯದ ಪದವು ಹೆರೋದರಲ್ಲಿ ಒಬ್ಬನೆಂದು ಸೂಚಿಸುತ್ತದೆ. [15]Henry E. Dosker, "Herod," in *The International Standard Bible Encyclopedia,* ed. James Orr (Grand Rapids, Mich.: Wm. B. Eerdmans Publishing Co, 1960), 3: 1378. [16]ಅವನು ಹೆಸರಿಗೆ ಮಾತ್ರ ಅಗ್ರಿಪ್ಪನಾಗಿದ್ದನು ಕೈಸರೈಯ ಔಗುಸ್ತನ ಮಂತ್ರಿಯಾಗಿದ್ದನು. [17]Jimmy Allen, *Survey of Acts*, vol. 1 (Searcy, Ark.: by the Author, 1986), 135. [18]ಹೆರೋದನ ಅಜ್ಜಿಯಾದ ಮರಿಯಾಮ್ನೆಯ ಮೂಲಕ ಯೆಹೂದ್ಯ ರಕ್ತವನ್ನು ಅಗ್ರಿಪ್ಪನು ಹೊಂದಿದ್ದನು. [19]"ಸಾಮಾನ್ಯ" ಎಂಬ ಪದವನ್ನು ನಾನು ಉಪಯೋಗಿಸುತ್ತೇನೆ; ಹೆರೋದ್ಯಳು ಸ್ನಾನಿಕನಾದ ಯೋಹಾನನಿಗೆ ಮುಯ್ಯಿ ತೀರಿಸಿ ಕೊಂಡಳು. [20]"ಓಮ್ನಿಪೊಟೆಂಟ್" ಎಂದರೆ "ಸರ್ವಶಕ್ತ" ಎಂಬರ್ಥ.

[21]ಸರಳೀಕರಿಸಲಾಗಿದೆ. [22]ಗ್ರೀಕ್ ಭಾಷೆಯಲ್ಲಿ "ಪರಿಶೀಲಿಸು" ಎಂದರೆ ಪ್ರಶ್ನೆಗಳಿಂದ ಮೇಲೆ

ಕೆಳಗೆ ಮಾಡು ಎಂಬುದಾಗಿದೆ. [23]ಹೆರೋದನು ಎಷ್ಟು ಜನ ಸಿಪಾಯಿಗಳನ್ನು ಕೊಂದನೆಂದು; ವರಗಳಿರುವದಿಲ್ಲ. ಪೇತ್ರ ನನ್ನು ಕಾಯುತ್ತಿದ್ದ 4 ಸಿಪಾಯಿಗಳು ನಿಶ್ಚಯವಾಗಿ ಸಂಹಾರಗೊಂಡರು. ಇತರರು ಪೇತ್ರನನ್ನು ಕಾಯಲು ಅಥವಾ ಸೆರೆಮನೆಯನ್ನು ಕಾಯುವ ಕರ್ತವ್ಯದಲ್ಲಿರಬಹುದು. [24]"ಓಮ್ನಿಸಿಯೆಂಟ" ಎಂದರೆ "ಸರ್ವಜ್ಞಾನಿ" ಎಂದರ್ಥ. [25]11:19ರ ಟಿಪ್ಪಣಿ ನೋಡಿರಿ. [26]1 ಅರಸು 5:9-12; ಎಜ್ರ 3:7. [27]ಹ್ಯೂಗೋ ಮೆಕಾಲ್ಡೆ. [28]ವೆಸ್ಟರ್ನ್ ಟೆಕ್ಸ್‌ನಲ್ಲಿ ಒಂದು ಒಪ್ಪಂದಕ್ಕೆ ಬರಲಾಗಿದೆ, ಸಮಯವನ್ನು ನಿರ್ದಿಷ್ಟವಾಗಿ ತಿಳಿಸಲಾಗಿದೆ. [29]ಜೋಸೆಫಸ್ *Antiquities* 19.8.2 (10-18). [30]*Antiquities* 19.8.2 (18-21).

[31]*Antiquities* 19.8.2 (25-26). [32]Leonard Louis Levinson, *Webster's Unafraid Dictionary* (New York: Collier Books, 1967), 89. [33]ಕೊಚ್ಚಿಕೊಂಡ ಪ್ರತಿಫಲ, ನೋಡಿರಿ ಕೀರ್ತನೆ 12:2-4; ಜ್ಞಾನೋಕ್ತಿ 26:28. [34]ದೇವದೂತರು ಕಾಣಿಸಿಕೊಂಡ ಸೂಚನೆಯಿರುವದಿಲ್ಲ. [35]ವಚನ 23ರಲ್ಲಿರುವ ಬಡಿದನು ಎಂಬುದನು ಗ್ರೀಕ್ ಭಾಷೆಯ ಪದ. ವಚನ 7ರಲ್ಲಿ ಆಶೀರ್ವಾದ ಎಂಬುದಾಗಿದೆ; ವಚನ 23ರಲ್ಲಿ ಅದು ಶಾಪ ಎಂಬುದಾಗಿದೆ. [36]*Antiquities* 19.8.2 (32-58). [37]ಜನರು ವಿವಿಧ ಜಂತುಗಳಾದ ರೌಂಡ್ ವರ್ಮ್, ಟೇಪ್‌ವರ್ಮ್, ಹುಕ್ ವರ್ಮ್, ಹಾಗೂ ಪಿನ್ ವರ್ಮ್‌ಗಳಿಂದ ಬಾಧಿತರಾದರು. [38]ಸಭೆಯ ವೃದ್ಧಿಯ ಕುರಿತ ಇನ್ನೊಂದು ವಿಧದ ಮಾತಾಗಿದೆ, ಅನ್ಯನು, ಹೆರೋದನ ಮರಣದಲ್ಲಿದ್ದ ದೇವರ ಹಸ್ತವನ್ನು ನೋಡಿರಬಹುದು, ಅದರ ಪರಿಣಾಮವನ್ನು ನೋಡಿ ವಾಕ್ಯ ವನ್ನು ಹೆಚ್ಚಾಗಿ ಗಮನಿಸಲು ಸಿದ್ಧನಾಗಿರಬಹುದು. [39]ಅಪೊಸ್ತರ ಕೃತ್ಯಗಳು ಪುಸ್ತಕದ ಸಮಯವನ್ನು ಅರಿಯಲು ಇದು ಸಾಕ್ಷಾಧಾರವಾಗಿದೆ. [40]ಈ ಅಧಿಕಾರಕ್ಕೆ ಪೆಟಿಕ್ಸ್‌ನು ಮತ್ತು ಫೆಸ್ತನು ಒಳಪಟ್ಟಿದ್ದರು, ಅಪೊಸ್ತಲರಕೃತ್ಯ ಮುಂದಿನ ಅಧ್ಯಾಯಗಳಲ್ಲಿ ಅವರನ್ನು ಸಂಧಿಸುತ್ತೇವೆ.

[41]"ಹೆರೋದ" *ಎನ್‌ಸೈಕ್ಲೊಪಿಡಿಯಾ ಬ್ರಿಟಾನಿಕ.* [42]James Burton. Coffman, *Commentary on Acts* (Austin, Tex.: Firm Foundation Publishing House, 1976), 240. [43]ಜೀವನ ಆಧಾರ - ಪದ್ಧತಿಗಳ ಕುರಿತು ನಾನು, ಯಾವುದೇ ವಿಚಾರವನ್ನು ಕೆಳಮಟ್ಟದಲ್ಲಿ ನೋಡುತ್ತಿರವದಿಲ್ಲ. ಮರಣಕ್ಕಿಂತಲೂ, ಜೀವಿಸುವಂಥದ್ದು ಶ್ರೇಷ್ಟವಾದದ್ದು ಎಂಬುದು ನನ್ನ ಅಭಿಪ್ರಾಯವಾಗಿದೆ.